# ಕನ್ನಡ ನುಡಿ

೧೬ನೆಯ ಜುಲೈ–೩ನೇ ಸೆಪ್ಟೆಂಬರ್, ೨೦೨೧



ಕರ್ನಾಟಕ ರಾಜ್ಯ ಸರ್ಕಾರದ ನೂತನ ಮುಖ್ಯಮಂತ್ರಿಗಳಾದ ಮಾನ್ಯಶ್ರೀ ಬಸವರಾಜ ಬೊಮ್ಮಾಯಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಹೆಚ್ಚಿನ ರೀತಿಯಲ್ಲಿ ಕನ್ನಡದ ಕೆಲಸಗಳನ್ನು ತಮ್ಮ ಅಧಿಕಾರಾವಧಿಯಲ್ಲಿ ನಿರ್ವಹಿಸಲಿ ಎಂದು ಕ.ಸಾ.ಪ. ಶುಭಹಾರೈಸುತ್ತದೆ.



ಬಹುಶ್ರುತ ವಿದ್ವಾಂಸರಾದ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್** ಅವರಿಗೆ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕ.ಸಾ.ಪ.ದಲ್ಲಿ ಸ್ಥಾಪಿಸಿರುವ

## ‘ನೃಪತುಂಗ ಸಾಹಿತ್ಯ ಪ್ರಶಸ್ತಿ’



ಕನ್ನಡ, ಸಂಸ್ಕೃತಿ ಹಾಗೂ ಇಂಧನ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರಿಗೆ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಕ.ಸಾ.ಪ. ಪ್ರಕಟಣೆಯ ಕೆಲವು ಗ್ರಂಥಗಳನ್ನು ನೀಡಿ ಅಭಿನಂದಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ, ಪರಿಷತ್ತಿನ ಗೌರವ ಕಾರ್ಯದರ್ಶಿ ಡಾ. ಪದ್ಮರಾಜ ದಂಡಾವತಿ ಉಪಸ್ಥಿತರಿದ್ದರು.




ಡಾ. ಮನು ಬಳಿಗಾರ್ ತಮ್ಮ ಗೌರವಧನವನ್ನು ಬಿಟ್ಟುಕೊಟ್ಟು ಈ ವರ್ಷವೇ ಸ್ಥಾಪಿಸಿರುವ ‘ಕ.ಸಾ.ಪ. ಗೌರವ ಪ್ರಶಸ್ತಿ’ಯನ್ನು ೨೦೨೧ನೆಯ ಸಾಲಿಗೆ ಹಿರಿಯ ಸಾಹಿತಿಗಳಾದ ಶ್ರೀ ಎಸ್. ದಿವಾಕರ ಹಾಗೂ ಡಾ. ಮಲ್ಲಿಕಾ ಘಂಟಿ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಡಾ. ಜಿ. ರವಿಶಂಕರ್ ಅವರು ಪ್ರದಾನ ಮಾಡಿದರು. ಪರಿಷತ್ತಿನ ಪದಾಧಿಕಾರಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್ ಹಾಗೂ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು.

## ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿ
## ಕಿತ್ತೂರು ರಾಣಿ ಚೆನ್ನಮ್ಮ

- ನಾಡೋಜ ಡಾ. ಮನು ಬಳಿಗಾರ್

(ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ತನ್ನಿಮಿತ್ತ ಲೇಖನ)

- ಕನ್ನಡದ ಕೆಲಸಕ್ಕೆ ಕೊನೆ ಎಂಬುದೇ ಇಲ್ಲ
- ಕನ್ನಡ ಕಾಯಕ.. ಅಭಿಮಾನ ಪ್ರೇರಕ...



ಕನ್ನಡ ಸಾಹಿತ್ಯ ಪರಿಷತ್ತು ದಿನಾಂಕ ೦೩-೦೮-೨೦೨೧ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ "ಪ್ರಾಚೀನ ಕವಿಗಳ ಮತ್ತು ವಚನಕಾರರ ಭಾವಚಿತ್ರಗಳ ಅನಾವರಣ" ಸಮಾರಂಭವನ್ನು ಆಯೋಜಿಸಿತ್ತು. ಹಿರಿಯ ಲೇಖಕಿ ಹಾಗೂ ಮಾಜಿ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಭಾವಚಿತ್ರಗಳನ್ನು ಅನಾವರಣಗೊಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್ ಹಾಗೂ ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಸಮಾರಂಭದಲ್ಲಿ ಉಪಸ್ಥಿತರಿದ್ದರು.



ಶ್ರೀ ಕೆ. ಮೋಹನ್‌ದೇವ್ ಆಳ್ವ ದತ್ತಿ ಪ್ರಶಸ್ತಿಯನ್ನು ನಾಡೋಜ ಬಿ.ಕೆ. ಸುಮಿತ್ರ ಹಾಗೂ ಮೈಸೂರಿನ ಡಾ|| ಟಿ.ಎನ್. ಪದ್ಮಾ ಅವರಿಗೆ ದತ್ತಿ ದಾನಿಗಳು ಹಾಗೂ ಸಂಸ್ಕೃತಿ ಚಿಂತಕರಾದ ಶ್ರೀ ಕೆ. ಮೋಹನ್‌ದೇವ್ ಆಳ್ವ ಅವರು ಪ್ರದಾನ ಮಾಡಿದರು. ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರೊಂದಿಗೆ ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್ ಹಾಗೂ ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು.




ಮನೋಹರಿ ಪಾರ್ಥಸಾರಥಿ ಮನುಶ್ರೀ ದತ್ತಿ ಪ್ರಶಸ್ತಿಯನ್ನು ಡಾ. ಜಯಂತ ಕಾಯ್ಕಿಣಿಗೆ, ಪಂಕಜಶ್ರೀ ಸಾಹಿತ್ಯ ಪ್ರಶಸ್ತಿಯನ್ನು ಶ್ರೀಮತಿ ಎಚ್.ಎನ್. ಆರತಿಗೆ ಹಾಗೂ ಟಿ. ಗಿರಿಜಾ ಸಾಹಿತ್ಯ ಪ್ರಶಸ್ತಿಯನ್ನು ಡಾ. ಅಕ್ಕ ಗಂಗಾಂಬಿಕಾ ಪಾಟೀಲ ಅವರಿಗೆ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರು ಪ್ರದಾನ ಮಾಡಿದರು. ನಾಡೋಜ ಡಾ. ಮನು ಬಳಿಗಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದತ್ತಿ ದಾನಿಗಳಾದ ಶ್ರೀಮತಿ ಶೈಲಜಾ, ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್, ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು.



ಶ್ರೀ ಜಾಣಗೆರೆ ವೆಂಕಟರಾಮಯ್ಯ ಹಾಗೂ ಶ್ರೀ ಎ. ಆರೋಗ್ಯಪ್ಪನವರಿಗೆ ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿಯನ್ನು ಹಾಗೂ ಶ್ರೀ ಮಲ್ಲಿಕಾರ್ಜುನಪ್ಪ ನಿಜಗುಣಪ್ಪ ಚಿಕ್ಕಮಠ ಅವರಿಗೆ ಶ್ರೀಮತಿ ಕಂಡ್ಲೂರು ಗಿರಿಜಮ್ಮ ಮತ್ತು ನರಸಿಂಹಯ್ಯ ಜೋಗಿ ದತ್ತಿ ಪ್ರಶಸ್ತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಎಸ್. ರಂಗಪ್ಪನವರು ಪ್ರದಾನ ಮಾಡಿದರು. ನಾಡೋಜ ಡಾ. ಮನು ಬಳಿಗಾರ್ ಅವರೊಂದಿಗೆ ಕ.ಸಾ.ಪ. ಪದಾಧಿಕಾರಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್, ಶ್ರೀ ಪಿ. ಮಲ್ಲಿಕಾರ್ಜುನಪ್ಪ ಹಾಗೂ ಕನ್ನಡಪರ ಹೋರಾಟಗಾರ್ತಿ ಡಾ. ರೀಟಾ ರೀನಿ ಉಪಸ್ಥಿತರಿದ್ದರು.



೨೦೨೦ನೆಯ ಸಾಲಿನ ವಿವಿಧ ಪುಸ್ತಕ ದತ್ತಿ ಪ್ರಶಸ್ತಿಗಳಿಗೆ ೫೨ ಅತ್ಯುತ್ತಮ ಕೃತಿಗಳನ್ನು ಆಯ್ಕೆ ಮಾಡಿ ಲೇಖಕರುಗಳಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಿಡಸಾಲೆ ಪುಟ್ಟಸ್ವಾಮಯ್ಯ ಸಾಹಿತ್ಯ ಪ್ರಶಸ್ತಿಗೆ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಸಂಕ್ಷಿಪ್ತ ಪಾಲಿ-ಕನ್ನಡ ನಿಘಂಟು' ಹಾಗೂ ರತ್ನಾಕರವರ್ಣಿ ಮುದ್ದಣ ಅನಾಮಿಕ ದತ್ತಿ (ಗದ್ಯ ಕೃತಿ) ಪ್ರಶಸ್ತಿಗೆ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಪದ ಸೋಪಾನ' ಕೃತಿಗೆ ಪ್ರಶಸ್ತಿ ಲಭಿಸಿತು. ಪ್ರಶಸ್ತಿ ಪುರಸ್ಕೃತರೊಂದಿಗೆ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್, ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್ ಹಾಗೂ ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು.

# ಕನ್ನಡ ನುಡಿ

೧೬ನೇ ಜುಲೈ–೩ನೇ ಸೆಪ್ಟೆಂಬರ್ ೨೦೨೧

● ಸಂಪುಟ : ೮೬ ● ಸಂಚಿಕೆ : ೭, ೮, ೯

ಅಧ್ಯಕ್ಷರು
**ನಾಡೋಜ ಡಾ. ಮನು ಬಳಿಗಾರ್**

ಗೌರವ ಕಾರ್ಯದರ್ಶಿಗಳು
**ಡಾ. ಪದ್ಮರಾಜ ದಂಡಾವತಿ**
**ಕೆ. ರಾಜಕುಮಾರ್**

ಗೌರವ ಕೋಶಾಧ್ಯಕ್ಷರು
**ಪಿ. ಮಲ್ಲಿಕಾರ್ಜುನಪ್ಪ**

ಸಂಪಾದಕರು
**ಬಿ.ಎನ್. ರಮೇಶ್**

ಮುಖಪುಟ, ಒಳಪುಟ ವಿನ್ಯಾಸ
**ಅವಿನಾಶ್ ಕೆ.ಎನ್.**


## ನುಡಿ ಹೂರಣ


▶ ಅಧ್ಯಕ್ಷರ ನುಡಿ.......... ೧
▶ ಸಂಪಾದಕೀಯ.......... ೩
▶ ಕನ್ನಡ ಸಾಹಿತ್ಯ ಭವನಗಳ ಉಸ್ತುವಾರಿ ಸಮಿತಿ....೫
▶ ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿ ಕಿತ್ತೂರು ರಾಣಿ ಚೆನ್ನಮ್ಮ.......... ೬
▶ ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯ ಸಾಧನೆಯ ಹಾದಿಯಲ್ಲಿ.......... ೯
▶ ೨೦೨೦ನೆಯ ಸಾಲಿನ ವಿವಿಧ ದತ್ತಿ ಪ್ರಶಸ್ತಿಗಳಿಗೆ ಆಯ್ಕೆಯಾದ ಕೃತಿಗಳು.......... ೧೧
▶ 'ಕುವೆಂಪು ಸಾಹಿತ್ಯ ಮತ್ತು ಸಮಕಾಲೀನತೆ' ಕುರಿತು ರಾಷ್ಟ್ರಮಟ್ಟದ ಕಮ್ಮಟ.......... ೧೩
▶ ವಾಙ್ಮಯಲೋಕದ ವಿಸ್ಮಯ: ಕ.ಸಾ.ಪ. ಮಹಿಳಾ ಸಾಹಿತ್ಯ ಸಂಪುಟಗಳು.......... ೧೪
▶ ಸಾದರ ಸ್ವೀಕಾರ.......... ೧೬



ಬೆಲೆ : ಒಂದು ರೂಪಾಯಿ



ವಿಳಾಸ :

**ಕನ್ನಡ ನುಡಿ** ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು – ೫೬೦ ೦೧೮
ದೂರವಾಣಿ : ೨೬೬೧೨೯೯೧–೨೬೬೨೩೫೮೪
ದೂರಪತ್ರಕ : ೨೨೪೨೩೮೬೭
ವೆಬ್‌ಸೈಟು : http://www.kasapa.in
ಇಮೇಲ್ : kannadaparishattu@gmail.com


## ಅಧ್ಯಕ್ಷರ ನುಡಿ




# ಕನ್ನಡದ ಕೆಲಸಕ್ಕೆ ಕೊನೆ ಎಂಬುದೇ ಇಲ್ಲ...

**ಕ**ನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯ ನನ್ನ ಅವಧಿ ಈ ಸಂಚಿಕೆ ನಿಮ್ಮ ಕೈ ಸೇರುವ ವೇಳೆಗೆ ಹೆಚ್ಚೂ ಕಡಿಮೆ ಮುಗಿಯಲು ಬಂದಿರುತ್ತದೆ. ಪರಿಷತ್ತಿನ ಅಧ್ಯಕ್ಷ ಹುದ್ದೆಯಲ್ಲಿ ಐದು ವರ್ಷ ಆರು ತಿಂಗಳು ಹೇಗೆ ಕಳೆದು ಹೋದುವು ಎಂದು ತಿಳಿಯಲಿಲ್ಲ. ಮೈಸೂರಿನ ಅಂದಿನ ಒಡೆಯರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದರ್ಶಿತ್ವದಿಂದ ಮತ್ತು ಆಗಿನ ದೀವಾನರಾದ ಸರ್ ಎಂ. ವಿಶ್ವೇಶ್ವರಯ್ಯ ಅವರ ಒತ್ತಾಸೆಯಿಂದಾಗಿ ಹುಟ್ಟಿದ ಈ ಸಂಸ್ಥೆಯಲ್ಲಿ ಕೆಲಸ ಮಾಡುವುದು ಪೂರ್ವಜನ್ಮದ ಸುಕೃತದ ಫಲ ಎಂದು ನಂಬಿದವನು ನಾನು. ಪರಿಷತ್ತಿನ ಗೌರವಾನ್ವಿತ ಆಜೀವ ಸದಸ್ಯರು ಚುನಾಯಿಸುವ ಅಧ್ಯಕ್ಷ ಹುದ್ದೆ ಸಾಮಾನ್ಯವಾದುದು ಅಲ್ಲ. ಈ ಹಿರಿಯರನ್ನು ನೆನಪಿಸಿಕೊಂಡರೆ ಮೈ ರೋಮಾಂಚನವಾಗುತ್ತದೆ; ಮನಸ್ಸು ಧನ್ಯತೆಯಿಂದ ಮೃದುವಾಗುತ್ತದೆ. ಅವರೆಲ್ಲ ಕನ್ನಡದ ಸಾಲು ದೀಪಗಳಂಥ ಚೇತನಗಳು. ಅವರು ಆಗಿನ ಕಾಲದಲ್ಲಿ, ಆರ್ಥಿಕ ತೊಂದರೆಗಳ ನಡುವೆ ಮಾಡಿದ ಕೆಲಸ ಅಸಾಧಾರಣವಾದುದು. ಆದರೆ, ಅವರಲ್ಲಿ ಕನ್ನಡದ ಏಳಿಗೆಯ ಬಗೆಗೆ ಇದ್ದ ಕಟಿಬದ್ಧತೆ ಸಾಟಿಯಿಲ್ಲದ್ದು. ಆಗ ಕೆಲಸ ಮಾಡಿದ್ದು ಒಂದು ನೆಲೆಯದು. ಈಗಿನ ಕೆಲಸ ಇನ್ನೊಂದು ನೆಲೆಯದು. ಎರಡರ ನಡುವೆ ಇರುವ ಸಾಮ್ಯ ಎಂದರೆ ಕನ್ನಡದ ಏಳಿಗೆ ಮಾತ್ರ. ಕನ್ನಡದ ಮುಂದೆ ಆಗಲೂ ಸವಾಲುಗಳು ಇದ್ದುವು. ಈಗಲೂ ಇವೆ. ಬಹುಶಃ ಮುಂದೆಯೂ ಇರುತ್ತವೆ.

ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿದಾಗ ದೇಶಕ್ಕೆ ಇನ್ನೂ ಸ್ವಾತಂತ್ರ್ಯ ಬಂದಿರಲಿಲ್ಲ. ಕರ್ನಾಟಕದ ಏಕೀಕರಣವೂ ದೂರದ ಕನಸು ಎನ್ನುವಂತೆ ಇತ್ತು. ಈಗ ನಮಗೆ ಸ್ವಾತಂತ್ರ್ಯ ಬಂದು ೭೫ ವರ್ಷಗಳು ತುಂಬುತ್ತಿವೆ. ಇನ್ನೇನು ಕರ್ನಾಟಕ ರಾಜ್ಯೋತ್ಸವವೂ ಬರಲಿದೆ. ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ಮಹಾತ್ಮ ಗಾಂಧೀಜಿಯವರು ಮಾತೃಭಾಷಾ ಶಿಕ್ಷಣದ ಬಹುದೊಡ್ಡ ಪ್ರತಿಪಾದಕರಾಗಿದ್ದರು. ಯಾವ ತತ್ವದ ಆಚರಣೆಯೇ ಇರಲಿ ಅದು ಮನೆಯಿಂದ ಆರಂಭವಾಗಬೇಕು ಎಂಬುದರಲ್ಲಿ ಮಹಾತ್ಮರಿಗೆ ಅಚಲ ನಂಬಿಕೆ. ಅವರು ತಮ್ಮ ಮಕ್ಕಳಿಗೆ ಗುಜರಾತಿ ಭಾಷೆಯಲ್ಲಿಯೇ ಶಿಕ್ಷಣ ಕೊಡಿಸುತ್ತಿದ್ದರು. ಇತರರೂ ಅದನ್ನು ಅನುಸರಿಸಬೇಕು ಎಂದು ಅವರು ಬಯಸುತ್ತಿದ್ದರು. ಆದರೆ, ಗಾಂಧೀಜಿಯವರ ಈ ಪ್ರತಿಪಾದನೆಯನ್ನು ಇನ್ನೂ ಸಂಪೂರ್ಣವಾಗಿ ಜಾರಿಗೆ ತರಲು ನಮಗೆ ಆಗುತ್ತಿಲ್ಲ.

ಈ ಕುರಿತು ಏಳು ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ನಿಲುವಿನಲ್ಲಿ ಎಳ್ಳುಕಾಳಿನಷ್ಟೂ ಸಂಶಯವಿಲ್ಲ. ಕನ್ನಡವನ್ನು ಶಿಕ್ಷಣದ ಮಾಧ್ಯಮವಾಗಿ ಜಾರಿಗೆ ತರಬೇಕು ಎನ್ನುವ ಕುರಿತು ನಾನು ಅಧ್ಯಕ್ಷನಾದ ಮೇಲೆ ಅನೇಕ ಸಾಹಿತಿಗಳ, ಕನ್ನಡ ಪರ ಹೋರಾಟಗಾರರ ಸಭೆಗಳನ್ನು ಮಾಡಿದೆ. ನಾನು ಅಧ್ಯಕ್ಷನಾದ ಹೊಸದರಲ್ಲಿಯೇ ಅಂದರೆ ೨೦೧೬ ರ ಜುಲೈ ತಿಂಗಳಲ್ಲಿಯೇ ಒಂದು ಉನ್ನತ ಮಟ್ಟದ ಸಭೆಯನ್ನು ಏರ್ಪಡಿಸಿದ್ದೆ. ಅದರಲ್ಲಿ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ರಾಮಾ ಜೋಯಿಸರು, ಶ್ರೀ ಎ.ಜೆ. ಸದಾಶಿವ ಅವರು, ಶ್ರೀ ನಾಗಮೋಹನದಾಸ್ ಅವರು ಪಾಲುಗೊಂಡಿದ್ದರು. ಜೊತೆಗೆ ಹಿರಿಯ ಸಾಹಿತಿಗಳೂ, ಕನ್ನಡ ಹೋರಾಟಗಾರರೂ ಆದ ಡಾ. ಎಂ. ಚಿದಾನಂದಮೂರ್ತಿ, ಪ್ರೊ. ಬರಗೂರು ರಾಮಚಂದ್ರಪ್ಪ, ಪ್ರೊ. ಎಸ್.ಜಿ.



ಸಿದ್ದರಾಮಯ್ಯ, ಶಿಕ್ಷಣ ತಜ್ಞರಾದ ವಿ.ಪಿ. ನಿರಂಜನ ಆರಾಧ್ಯ, ಅಬ್ದುಲ್ ರೆಹಮಾನ್ ಪಾಷಾ ಮುಂತಾದವರು ಭಾಗವಹಿಸಿದ್ದರು. ಎಲ್ಲರೂ ಸೇರಿ, ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಲು ಸಂವಿಧಾನ ತಿದ್ದುಪಡಿಗೆ ಆಗ್ರಹಿಸಿ ಪರಿಷತ್ತಿನ ಈ ನಿರ್ಣಯವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲು ವಿಧಾನಮಂಡಲದ ಉಭಯ ಸದನಗಳ ಅಧ್ಯಕ್ಷರು ಮತ್ತು ಸಭಾಪತಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಈ ಕುರಿತಂತೆ ಉಭಯ ಸದನಗಳಲ್ಲಿ ನಿರ್ಣಯ ಅಂಗೀಕರಿಸಬೇಕು ಎಂದೂ ನಾವು ಮನವಿ ಮಾಡಿಕೊಂಡಿದ್ದೆವು.

ಈ ಮನವಿಗೆ ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ಯಾವ ರೀತಿ ಸ್ಪಂದಿಸಬೇಕಿತ್ತೋ ಆ ರೀತಿಯಲ್ಲಿ ಅಥವಾ ಸ್ಪಂದಿಸಿಲ್ಲ ಎಂಬ ಬೇಸರ ಕನ್ನಡ ಮಾಧ್ಯಮದ ಪರ ಇರುವ ಎಲ್ಲರ ಮನಸ್ಸಿನಲ್ಲಿ ಕೊರೆಯುತ್ತಿದೆ. ಹಾಗೆಂದು ನಾವು ನಮ್ಮ ಪ್ರಯತ್ನಗಳನ್ನು ಬಿಡಲು ಆಗದು. ನಮ್ಮ ಗುರಿ ಸಾಧಿಸುವ ವರೆಗೆ ಹಲವು ವಿಧಗಳಲ್ಲಿ ಪ್ರಯತ್ನಗಳನ್ನು ಮುಂದುವರಿಸಲೇಬೇಕಾಗುತ್ತದೆ. ಕೇಂದ್ರ ಸರ್ಕಾರ ಕೆಲವು ತಿಂಗಳ ಹಿಂದೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಘೋಷಿಸಿದೆ. ಅದರಲ್ಲಿ ಮಾತೃ ಭಾಷೆ / ರಾಜ್ಯ ಭಾಷೆ ಶಿಕ್ಷಣದ ಮಾಧ್ಯಮ ಆಗಬೇಕು ಎಂಬ ಪ್ರಸ್ತಾಪ ಇದೆ. ಆದರೆ, ರಾಜ್ಯ ಭಾಷೆಯಾದ ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ ಕೊಡಲು ಸುಪ್ರೀಂ ಕೋರ್ಟಿನ ಆದೇಶ ತೊಡಕಾಗಿದೆ. ಅದರ ಪ್ರಕಾರ ಶಿಕ್ಷಣದ ಮಾಧ್ಯಮದ ಆಯ್ಕೆ ಪೋಷಕರಿಗೆ ಬಿಟ್ಟಿದ್ದು. ಹೀಗಾಗಿ ಎಲ್ಲ ಪೋಷಕರು ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಕಳಿಸಿಕೊಡುತ್ತಿದ್ದಾರೆ. ಸರ್ಕಾರಗಳೂ ಇಂಗ್ಲಿಷ್ ಮಾಧ್ಯಮದ ಪರವಾಗಿಯೇ ಇರುವಂತೆ ಭಾಸವಾಗುತ್ತದೆ. ಆದಾಗ್ಯೂ, ಪ್ರಾಥಮಿಕ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಒದಗಿಸಲು ಇರುವ ಅಡ್ಡಿಗಳನ್ನು ನಿವಾರಣೆ ಮಾಡಬೇಕು ಎಂದು ಕೋರಿ ಪ್ರಧಾನಿ ಶ್ರೀ.ನರೇಂದ್ರ ಮೋದಿ ಅವರಿಗೂ ಪತ್ರ ಬರೆದಿದ್ದೆವು. ಪರಿಷತ್ತಿನ ಇತಿಹಾಸದಲ್ಲಿ ಪ್ರಧಾನಿಯೊಬ್ಬರಿಗೆ ಪತ್ರ ಬರೆದ ಉದಾಹರಣೆ ಇನ್ನೊಂದು ಇಲ್ಲ ಎಂಬುದು ಕಚೇರಿಯ ದಾಖಲೆಗಳನ್ನು ಪರಿಶೀಲಿಸಿದಾಗ ತಿಳಿದು ಬರುತ್ತದೆ.

ಹಿಂದಿನ ಒಂದು ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಸಾವಿರ ಸರ್ಕಾರಿ ಶಾಲೆಗಳನ್ನು ಆಂಗ್ಲ ಮಾಧ್ಯಮ ಶಾಲೆಗಳಾಗಿ ಬದಲಾಯಿಸುವ ನಿರ್ಣಯ ತೆಗೆದುಕೊಂಡಿತು. ಇದು ಕನ್ನಡಕ್ಕೆ ಮಾರಕವಾದ ನಿರ್ಣಯವಾಗಿತ್ತು. ಆಗಲೂ ಕನ್ನಡ ಸಾಹಿತ್ಯ ಪರಿಷತ್ತು ತಕ್ಷಣ ಪ್ರತಿಕ್ರಿಯಿಸಿತು. ಸಾಹಿತಿಗಳ ಕನ್ನಡ ಹೋರಾಟಗಾರರ ಸಭೆ ಕರೆಯಿತು. ಈ ಸಭೆಯಲ್ಲಿ ಮೈಸೂರಿನಿಂದ ಪ್ರಯಾಣ ಮಾಡಿ ಬಂದ ಡಾ.ಎಸ್.ಎಲ್.ಭೈರಪ್ಪ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಚಂದ್ರಶೇಖರ ಕಂಬಾರ, ಪ್ರೊ.ಚಂದ್ರಶೇಖರ ಪಾಟೀಲ. ಪ್ರೊ.ಹಂಪ.ನಾಗರಾಜಯ್ಯ, ಕನ್ನಡ ಹೋರಾಟಗಾರ ಟಿ.ಎ.ನಾರಾಯಣಗೌಡ ಮುಂತಾದವರು ಭಾಗವಹಿಸಿದ್ದರು. ಎಲ್ಲರೂ ಸರ್ವಾನುಮತದಿಂದ ಸರ್ಕಾರದ ನಿರ್ಣಯವನ್ನು ವಿರೋಧಿಸಿದರು. ಮುಖ್ಯಮಂತ್ರಿಗಳನ್ನು ಖುದ್ದಾಗಿ ಕಂಡು ಮನವಿ ಅರ್ಪಿಸಬೇಕು ಎಂದೂ ಆ ಸಭೆಯಲ್ಲಿ ನಿರ್ಣಯಿಸಲಾಗಿತ್ತು.

ಇವು ಕನ್ನಡ ಮಾಧ್ಯಮ ಕುರಿತು ಪರಿಷತ್ತು ಇಟ್ಟ ಪ್ರಮುಖ ಹೆಜ್ಜೆಗಳು ಎಂದು ಇಲ್ಲಿ ಪ್ರಸ್ತಾಪ ಮಾಡಿರುವೆ. ಇಂಥ ಅನೇಕ ಸಭೆಗಳನ್ನು ಪರಿಷತ್ತು ಏರ್ಪಡಿಸಿದೆ. ಕನ್ನಡಕ್ಕಾಗಿ ಬೀದಿಗೆ ಇಳಿದು ಹೋರಾಟ ಮಾಡಲು ತಾನು ಸಿದ್ಧ ಎಂಬ ಬದ್ಧತೆಯನ್ನೂ ಪ್ರದರ್ಶಿಸಿದೆ. ಈ ಬದ್ಧತೆಯ ಭಾಗವಾಗಿಯೇ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನೌಕರಿಗಾಗಿ ನಡೆಯುವ ಐ.ಬಿ.ಪಿ.ಎಸ್. ಪರೀಕ್ಷೆಗಳನ್ನು ಕನ್ನಡದಲ್ಲಿಯೂ ಏರ್ಪಡಿಸಬೇಕು ಎಂದು ಆಗ್ರಹಿಸಿ ಕೇಂದ್ರದ ಹಣಕಾಸು ಸಚಿವೆಯಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದೆವು. ಕೇವಲ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮಾತ್ರ ಪರೀಕ್ಷೆಗಳನ್ನು ನಡೆಸಲು ಐ.ಬಿ.ಪಿ.ಎಸ್ ಸಿದ್ಧತೆ ಮಾಡಿಕೊಂಡಿತ್ತು. ಪರಿಷತ್ತು ಪತ್ರ ಬರೆಯುತ್ತಿದ್ದಂತೆಯೇ ಐ.ಬಿ.ಪಿ.ಎಸ್ ಪರೀಕ್ಷೆಯನ್ನು ಅಮಾನತಿನಲ್ಲಿ ಇಡಲಾಗಿದೆ. ಈ ಪರೀಕ್ಷೆಗಳು ಬೇಗ ನಡೆದು ಕನ್ನಡದ ಮಕ್ಕಳಿಗೆ ಉದ್ಯೋಗ ಅವಕಾಶಗಳು ಸಿಗಲಿ ಎಂದು ಆಶಿಸುತ್ತೇನೆ. ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಪರೀಕ್ಷೆ ನಡೆಯುವುದರಿಂದ ಉಳಿದ ಎಲ್ಲ ರಾಜ್ಯ ಭಾಷೆಗಳಿಗೆ ಅನ್ಯಾಯವಾಗುತ್ತದೆ ಎಂಬುದು ಕ.ಸಾ.ಪ ನಿಲುವು ಎಂಬುದನ್ನು ಇಲ್ಲಿ ಒತ್ತಿ ಹೇಳಲು ಬಯಸುವೆ. ಮತ್ತು ಅದು ದೇಶದ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು ಎಂಬುದೂ ನಮ್ಮ ನಿಲುವಾಗಿದೆ. ಈ ವಿಚಾರದಲ್ಲಿಯೂ ಪ್ರಧಾನಿ ಶ್ರೀ.ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದೆವು ಎಂಬುದನ್ನು ಇಲ್ಲಿ ಪ್ರಸ್ತಾಪಿಸಬೇಕು.




ಇವು ಕನ್ನಡ ಭಾಷೆ ಮತ್ತು ಕನ್ನಡಿಗರ ಉದ್ಯೋಗಕ್ಕೆ ಸಂಬಂಧಿಸಿದ ವಿಚಾರಗಳಾದರೆ ಗಡಿ ವಿಚಾರದಲ್ಲಿಯೂ ಪರಿಷತ್ತು ಕೈ ಕಟ್ಟಿ ಕುಳಿತಿಲ್ಲ. ಬೆಳಗಾವಿ ವಿಚಾರದಲ್ಲಿ ಮತ್ತೆ ಮತ್ತೆ ಕ್ಯಾತೆ ತೆಗೆಯುವ ಮಹಾರಾಷ್ಟ್ರ ಸರ್ಕಾರವನ್ನು ಪರಿಷತ್ತು ಉಗ್ರವಾದ ಭಾಷೆಯಲ್ಲಿ ಖಂಡಿಸಿದೆ. ಕನ್ನಡಿಗರು ಮತ್ತು ಕರ್ನಾಟಕ ಸರ್ಕಾರ ಮಹಾರಾಷ್ಟ್ರಕ್ಕೆ ಮತ್ತು ಮಹಾರಾಷ್ಟ್ರದ ಪರ ಇರುವವರಿಗೆ ತಕ್ಕ ಉತ್ತರ ಕೊಡಲು ಸಮರ್ಥವಾಗಿದೆ ಎಂದು ಪರಿಷತ್ತು ಯಾವಾಗಲೂ ನಂಬಿಕೊಂಡು ಬಂದಿದೆ. ಇದೇ ಮಾತನ್ನು ಮಹಾರಾಷ್ಟ್ರ ಸರ್ಕಾರದ ಉದ್ಧಟತನವನ್ನು ಖಂಡಿಸುವಾಗ ಬೆಳಗಾವಿ–ಮಹಾರಾಷ್ಟ್ರದ ಗಡಿ ಪ್ರದೇಶವಾದ ಕಾಗವಾಡದಲ್ಲಿ ನಡೆದ ಬೆಳಗಾವಿ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸುವಾಗಲೂ ಹೇಳಿದ್ದೆ. ಮಲಗಿದ ಸಿಂಹ ಏನು ಮಾಡುತ್ತದೆ ಎಂದು ಮಹಾರಾಷ್ಟ್ರಿಗರು ಕನ್ನಡಿಗರನ್ನು ಕೆಣಕಬಾರದು ಎಂದು ಆಗ ತಾಕೀತು ಮಾಡಿದ್ದೆ. ಮರುದಿನ ಅದು ಎಲ್ಲ ಕನ್ನಡ ಪತ್ರಿಕೆಗಳಲ್ಲಿ "ಕ.ಸಾ.ಪ ಅಧ್ಯಕ್ಷರ ಸಿಂಹ ಗರ್ಜನೆ" ಎಂದು ವರದಿಯಾಗಿ ನೆರೆಯ ರಾಜ್ಯಕ್ಕೆ ತಕ್ಕ ಸಂದೇಶವನ್ನು ತಲುಪಿಸಿತ್ತು. ಆದ್ದರಿಂದ, ಬೆಳಗಾವಿ ಎಂದೆಂದಿಗೂ ಕರ್ನಾಟಕದ ಭಾಗವಾಗಿಯೇ ಇರುತ್ತದೆ ಎಂಬುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ ಎಂಬ ಸಂಗತಿಯನ್ನು ಇಲ್ಲಿ ಒತ್ತಿ ಒತ್ತಿ ಹೇಳಲು ಬಯಸುತ್ತೇನೆ. ಇವೆಲ್ಲ ಪಕ್ಕದ ರಾಜ್ಯವಾದ ಮಹಾರಾಷ್ಟ್ರದ ಧುರೀಣರು ತಮ್ಮ ರಾಜ್ಯದಲ್ಲಿನ ಆಂತರಿಕ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆ ಕಡೆ ಸೆಳೆಯಲು ಮಾಡುವ ಹಳಸಲು ತಂತ್ರಗಳು ಎಂಬುದು ನಮ್ಮ ನೆನಪಿನಲ್ಲಿ ಇದ್ದರೆ ಸಾಕು.

ನೂತನ ಶಿಕ್ಷಣ ನೀತಿಯ ಅನುಸಾರವಾಗಿ ರಾಜ್ಯ ಸರ್ಕಾರ ಮೂರು ವರ್ಷಗಳ ಪದವಿ ಕೋರ್ಸ್ ಅನ್ನು ನಾಲ್ಕು ವರ್ಷಕ್ಕೆ ವಿಸ್ತರಿಸಿದೆ. ಆದರೆ, ಭಾಷಾ ವಿಷಯಗಳ ಬೋಧನೆಯನ್ನು ಕೇವಲ ಒಂದು ವರ್ಷಕ್ಕೆ ಇಳಿಸಿದೆ. ಇದು ಕೂಡದು; ಕನಿಷ್ಠ ಮೂರು ವರ್ಷಗಳ ಕಾಲ ಕನ್ನಡ ಕಲಿಕೆಯನ್ನು ಕಡ್ಡಾಯ ಮಾಡಬೇಕು

.....ಪುಟ ೪ ಕ್ಕೆ

## ಸಂಪಾದಕೀಯ

# ಕನ್ನಡ ಕಾಯಕ.. ಅಭಿಮಾನ ಪ್ರೇರಕ...



ಬಿ.ಎನ್. ರಮೇಶ್

ಕನ್ನಡ ಕಾಯಕ ವರ್ಷವನ್ನು ಘೋಷಣೆ ಮಾಡಿದ್ದ ಸರ್ಕಾರದಲ್ಲಿ ಮತ್ತೊಂದು ಮಹತ್ತರವಾದ ಪ್ರಯತ್ನ ಆಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೊಣೆ ಹೊತ್ತ ಸಚಿವ ಸುನಿಲ್ ಕುಮಾರ್ ಅವರು ಪ್ರಮಾಣ ವಚನವನ್ನು ಸ್ವೀಕರಿಸಿದ ನಂತರ ನನಗೆ ಶುಭ ಕೋರುವವರು, ಸನ್ಮಾನ ಮಾಡುವವರು ಹಾರ–ತುರಾಯಿ ಬಿಟ್ಟು ಒಂದು ಕನ್ನಡದ ಪುಸ್ತಕವನ್ನು ಕೊಂಡು ತಂದು ಉಡುಗೊರೆ ನೀಡಿ ಎಂದು ಮನವಿ ಮಾಡಿಕೊಂಡಿದ್ದರು. ಅದಾದ ನಂತರ ಹಲವರು ಸಚಿವರು ಕೂಡಾ ಇದೇ ರೀತಿಯ ಕನ್ನಡ ಪ್ರೀತಿಯನ್ನು ಮೆರೆದರು. ಅದಾದ ನಂತರ ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರೂ ಕೂಡಾ ಇನ್ನು ಮುಂದೆ ಸರ್ಕಾರ ಮತ್ತು ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ಸಂಸ್ಥೆಗಳು ನಡೆಸುವ ಸಭೆ ಮತ್ತು ಸಮಾರಂಭಗಳಲ್ಲಿ ಹೂಗುಚ್ಛ, ಹಾರ, ತುರಾಯಿ, ಹಣ್ಣಿನ ಬುಟ್ಟಿ, ಶಾಲು, ನೆನಪಿನ ಕಾಣಿಕೆಗಳನ್ನು ನೀಡಬಾರದು. ಅದರ ಬದಲು ಕನ್ನಡ ಪುಸ್ತಕಗಳನ್ನು ನೀಡಬಹುದು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಮೂಲಕ ಆದೇಶ ಹೊರಡಿಸಿದ್ದಾರೆ.

ಈ ನಿರ್ದೇಶನವನ್ನು ತಕ್ಷಣದಿಂದಲೇ ಜಾರಿಗೊಳಿಸಬೇಕು ಎಂದು ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೂಗುಚ್ಛ ಸ್ವೀಕರಿಸಲು ನಿರಾಕರಿಸಿ 'ಇದು ಅನಗತ್ಯ ವೆಚ್ಚ. ಸಭೆಗಳಲ್ಲಿ ಶಿಷ್ಟಾಚಾರದ ಹೆಸರಿನಲ್ಲಿ ಹೂಗುಚ್ಛ, ಹಾರ, ಶಾಲುಗಳನ್ನು ನೀಡುವ ಅಗತ್ಯವಿಲ್ಲ. ಇನ್ನು ಮುಂದೆ ಈ ಸಂಪ್ರದಾಯ ಬೇಡ' ಎಂದು ಹೇಳಿದ್ದರು. ಅದರ ಬೆನ್ನಲ್ಲೇ ಮುಖ್ಯಕಾರ್ಯದರ್ಶಿಯವರು ಆದೇಶ ಹೊರಡಿಸಿ, ಕಾಣಿಕೆಗಳ ಬದಲಿಗೆ ಕನ್ನಡ ಪುಸ್ತಕಗಳನ್ನು ಕಾಣಿಕೆಯಾಗಿ ನೀಡಬಹುದು ಎಂದು ತಿಳಿಸಿದರು. ಪುಸ್ತಕ ಕೊಡುಗೆ ಅಭಿಯಾನಕ್ಕೆ ಮೇಲ್ಪಂಕ್ತಿ ಹಾಕಿದ್ದು ಇದೇ ಮೊದಲಲ್ಲ. ಆದರೆ ಸರ್ಕಾರ ಮಂತ್ರಿ, ಮುಖ್ಯಮಂತ್ರಿಗಳು ಇಂತಹ ಸಂಪ್ರದಾಯಕ್ಕೆ ಪ್ರೋತ್ಸಾಹ ನೀಡಿದ್ದು ಅಭಿನಂದನಾರ್ಹ. ತಮ್ಮನ್ನು ಭೇಟಿಯಾಗಲು ಮತ್ತು ಅಭಿನಂದಿಸಲು ಬರುವವರು ಹಾರ, ತುರಾಯಿ ಮತ್ತು ನೆನಪಿನ ಕಾಣಿಕೆ ತರುವುದು ಬೇಡ. ಏನಾದರೂ ಕೊಡಲೇಬೇಕು ಎಂದಿದ್ದರೆ ಒಂದು ಕನ್ನಡ ಪುಸ್ತಕವನ್ನು ಖರೀದಿಸಿ ತಂದು ಕೊಡಿ ಎನ್ನುವುದು ಹಲವರಿಗೆ ಪ್ರೇರಣೆ ಆಗಲಿದೆ.

ಸಚಿವ ಸುನಿಲ್ ಕುಮಾರ್ ಅವರು ಮಾಡಿಕೊಂಡ ಮನವಿಯ ಬಳಿಕ ಸುಮಾರು ಎರಡು ಸಾವಿರ ಅತ್ಯುತ್ತಮ ಪುಸ್ತಕಗಳು ಬಂದಿವೆ. ಅವುಗಳನ್ನು ಕಾರ್ಕಳ ಗ್ರಂಥಾಲಯ, ಗ್ರಾಮ ಪಂಚಾಯಿತಿ ಮತ್ತು ಸರ್ಕಾರಿ ಶಾಲಾ ಗ್ರಂಥಾಲಯಗಳಿಗೆ ವಿತರಿಸಲು ವ್ಯವಸ್ಥೆ ಮಾಡಲಾಗುವುದು. ಇದರಿಂದ ಜ್ಞಾನ ದಾಹಿಗಳಿಗೆ ನೆರವಾಗುತ್ತದೆ ಎಂದು ತಿಳಿಸಿದ್ದಾರೆ. ಇದೇ ರೀತಿ ೩೪ ಸಚಿವರೂ ಕನ್ನಡ ಪುಸ್ತಕ ಪ್ರೀತಿ ತೋರಿಸಿದರೆ ಸಾವಿರಾರು ಕನ್ನಡ ಪುಸ್ತಕಗಳು ಖರೀದಿ ಆಗಲಿವೆ. ಆ ಮೂಲಕ ಕನ್ನಡ ಸಾಹಿತ್ಯದ ಹರಿವು, ಕನ್ನಡ ಬೆಳವಣಿಗೆ ಮತ್ತು ಪುಸ್ತಕ ಉದ್ಯಮವೂ ಬೆಳೆಯಲಿದೆ. ಅದೆಲ್ಲಕ್ಕಿಂತಲೂ ಮುಖ್ಯವಾಗಿ ಓದುವ ಅಭಿರುಚಿಯು ಕೊಂಚ ಮಟ್ಟಿಗಾದರೂ ಹೆಚ್ಚಲಿದೆ.

ಆದರೆ ಇದು ಪ್ರಚಾರದ ಗಿಮಿಕ್ ಆಗಬಾರದು. ಅಂತಃಶುದ್ಧಿಯಿಂದ ಕನ್ನಡವನ್ನು ಬೆಳೆಸುವ ನಿಟ್ಟಿನಲ್ಲಿ ಇದೊಂದು ಹೆಜ್ಜೆ ಆಗಬೇಕು ಎನ್ನುವ ಭಾವನೆಗಳು ಎಲ್ಲರಲ್ಲೂ ಕೇಳಿ ಬರುತ್ತಿವೆ. ಕೇವಲ ಸನ್ಮಾನ, ಅಭಿನಂದನೆ ಸಂದರ್ಭದಲ್ಲಿ ಕನ್ನಡ ಪುಸ್ತಕಗಳನ್ನು ನೀಡಿದರೆ ಕನ್ನಡದ ಬೆಳವಣಿಗೆ ಸಾಧ್ಯವಿಲ್ಲ. ಅದರ ಜತೆಗೆ ಸರ್ಕಾರದಿಂದ ಹಲವು ರಚನಾತ್ಮಕ ಕಾರ್ಯಕ್ರಮಗಳು ಆಗಬೇಕು. ಸಾಮಾಜಿಕ ಜಾಲತಾಣಗಳ ಭರಾಟೆಯಲ್ಲಿ ಕನ್ನಡದ ಬಳಕೆ, ಆಧುನಿಕ ಮಾಧ್ಯಮಗಳ ಬಳಕೆಯಿಂದಾಗಿ ಕನ್ನಡ ಸಂಸ್ಕೃತಿಯೂ ಮಾಯವಾಗುತ್ತಿದೆ. ಇದನ್ನು ಮರುಸ್ಥಾಪನೆ ಮಾಡುವುದು ಹೆಜ್ಜೆ–ಹೆಜ್ಜೆಯನ್ನೂ ಕನ್ನಡೀಕರಣ ಮಾಡುವುದರಿಂದ ಮಾತ್ರ ಸಾಧ್ಯ.

ಯಾವ ಭಾಷೆಗೆ ಉಪಯುಕ್ತತೆ ಇಲ್ಲವೋ ಅದು ಕಾಲಕ್ರಮೇಣ ನಾಶವಾಗುತ್ತದೆ, ಎಲ್ಲಿ ತನಕ ಕನ್ನಡ ಅವಶ್ಯಕವಲ್ಲವೋ ಅಲ್ಲೀ ತನಕ ಕನ್ನಡ ಬೆಳೆಯುವುದಿಲ್ಲ. ಕನ್ನಡ ಬೆಳೆಯದಿದ್ದರೆ ಅದರ ಅಸ್ಮಿತೆಯೂ ಅಳಿಯುವ ಹಾದಿ ಹಿಡಿಯುತ್ತದೆ. ಈ ಕಾರಣಕ್ಕಾಗಿ ಕನ್ನಡ ಕಲಿಕೆ, ಕನ್ನಡದ ಉದ್ಯೋಗ, ಕನ್ನಡದ ಆಡಳಿತಕ್ಕೆ ಸರ್ಕಾರಗಳು ಹೆಚ್ಚು ಆದ್ಯತೆ ನೀಡಬೇಕು.

ಇದೇ ಕಾರಣಕ್ಕೆ ಸುಮಾರು ವರ್ಷಗಳಿಂದಲೂ ೧೦ನೇ ತರಗತಿವರೆಗೆ

ಕನ್ನಡದಲ್ಲಿ ಓದಿದವರಿಗೆ ಮಾತ್ರ ಕರ್ನಾಟಕದಲ್ಲಿ ಉದ್ಯೋಗ ಎನ್ನುವ ಆದೇಶವನ್ನು ಹೊರಡಿಸಿ ಕನ್ನಡ ಭಾಗ್ಯ ಯೋಜನೆ ತನ್ನಿ ಎನ್ನುವ ಆಗ್ರಹಗಳು ಕೇಳಿ ಬರುತ್ತಿವೆ. ಎಲ್ಲಾ ಉದ್ಯೋಗಗಳಿಗೆ ಈ ಆದೇಶ ಜಾರಿ ಸಾಧ್ಯವೇ ಇಲ್ಲ ಎನ್ನುವುದು ನಿಜವಾದರೂ ರಾಜ್ಯದ ವ್ಯಾಪ್ತಿಗೆ ಬರುವ ಸಿ ಮತ್ತು ಡಿ ದರ್ಜೆಯ ಉದ್ಯೋಗಗಳನ್ನು ನೇಮಿಸಿಕೊಳ್ಳುವ ಸಂದರ್ಭದಲ್ಲಿ ಕನ್ನಡದ ಶೈಕ್ಷಣಿಕ ಅರ್ಹತೆಯ ಕಡ್ಡಾಯ ಖಾಸಗೀ ವಲಯದಲ್ಲೂ ಜಾರಿಗೆ ತರುವ ಅವಕಾಶಗಳಿವೆ.

ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ಇಂಥದ್ದೊಂದು ಪ್ರಯತ್ನವನ್ನು ಮಾಡಿ ಅಲ್ಲಿನ ಸರ್ಕಾರಗಳು ಪ್ರಾದೇಶಿಕತೆ ಬುಡ ಗಟ್ಟಿಮಾಡುವ ಹೆಜ್ಜೆ ಇಟ್ಟಿವೆ. ಡಾ.ಸರೋಜಿನಿ ಮಹಿಷಿ ವರದಿ ಸೇರಿದಂತೆ ಹಲವು ವರದಿಗಳಲ್ಲಿ ಕನ್ನಡದಲ್ಲಿ ಕಲಿತವರಿಗೆ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಇಂತಿಷ್ಟು ಉದ್ಯೋಗ ನೀಡಬೇಕು ಎನ್ನುವ ಶಿಫಾರಸುಗಳು ಬಂದಿವೆ. ಅದನ್ನು ಅನುಷ್ಠಾನ ಮಾಡುವ ಪ್ರಯತ್ನಗಳು ಈ ಸರ್ಕಾರದಿಂದ ಆಗಬೇಕಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವರು ಇಂಥಾ ಪ್ರಯತ್ನಕ್ಕೆ ಹೆಚ್ಚು ಒತ್ತು ನೀಡಬೇಕಿದೆ.

ಈಗಾಗಲೇ ರಾಜ್ಯ ಸರ್ಕಾರ ಪ್ರಸಕ್ತ ವರ್ಷವನ್ನು ಕಾಯಕ ವರ್ಷವೆಂದು ಘೋಷಣೆ ಮಾಡಿದೆ. ಯಾವುದಕ್ಕೆ ಕಾಯಕ ವರ್ಷ, ಅದರ ಉದ್ದೇಶವೇನು ಎಂಬುದರ ಬಗ್ಗೆ ತಿಳಿಸಿಲ್ಲ. ಕ್ರಿಯಾಯೋಜನೆ ರೂಪಿಸಿ ಇಂತಿಷ್ಟು ಅನುದಾನ ನೀಡಿಲ್ಲ. ಸರ್ಕಾರದ ಘೋಷಣೆಗಳಿಗೆ ಕೊರತೆ ಇಲ್ಲ. ಅವುಗಳನ್ನು ಎಷ್ಟರಮಟ್ಟಿಗೆ ಕಾರ್ಯಗತಗೊಳಿಸಬೇಕು ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲದಿದ್ದರೆ ಘೋಷಣೆಗೆ ಅರ್ಥವಿದೆಯೇ ಎಂದು ಕೆಲವರು ಪ್ರಶ್ನಿಸುತ್ತಿದ್ದಾರೆ.

ಪ್ರತಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಅಕ್ಷರ ಭವನ ನಿರ್ಮಾಣ ಮಾಡಬೇಕು. ಕನ್ನಡ ಭಾಷೆಯ ಬೆಳವಣಿಗೆ, ಅದರ ಸಾಧಕ, ಬಾಧಕಗಳ ಬಗ್ಗೆ ಚರ್ಚೆ ನಡೆಸುವಂತಾಗಬೇಕು. ಅನ್ಯಭಾಷಿಕರನ್ನು ವಿಶ್ವಾಸದಿಂದ ಕಂಡು ಅವರನ್ನೂ ಕನ್ನಡದೊಳಗೆ ಬೆರೆಯುವಂತೆ ಮಾಡಲು ಕನ್ನಡ ಭಾಷಾ ಕಲಿಕಾ ಶಿಬಿರ ಹಮ್ಮಿಕೊಳ್ಳಬೇಕು ಎಂಬ ಸಲಹೆಗಳು ಇವೆ.

ಮಹಾತ್ಮ ಗಾಂಧೀಜಿ ಅವರ ಮಾತಿನಲ್ಲಿ ಹೇಳಬೇಕಾದರೆ ಯಾವುದೇ ವಿಷಯವನ್ನು ಎಷ್ಟೇ ಪರಿಣಿತರು ಮಂಡಿಸಿದರೂ ಅದು ಬುದ್ಧಿಗೆ ಮಾತ್ರ ತಲುಪುತ್ತದೆ, ಹೃದಯಕ್ಕೆ ತಲುಪಬೇಕಾದರೆ ಅವರ ಮಾತೃ ಭಾಷೆಯಲ್ಲಿ ಹೇಳಿದರೆ ಮಾತ್ರ ಸಾಧ್ಯ. ಕನ್ನಡ ನಾಡಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳು ಕನ್ನಡವನ್ನೇ ಆಡಳಿತ ಭಾಷೆಯಾಗಿ, ಸಂವಹನ ಮಾಧ್ಯಮವಾಗಿ ಬಳಸಬೇಕಿದೆ.

ಸ್ಥಳೀಯ ಭಾಷಿಕರಿಗೆ ಹೆಚ್ಚಿನ ಆದ್ಯತೆ ಮತ್ತು ಆಡಳಿತ ವರ್ಗಕ್ಕೆ ಸ್ಥಳೀಯ ಸಂಸ್ಕೃತಿಯ ಪರಿಚಯವಾಗಬೇಕಾದರೆ ಕನ್ನಡವನ್ನು ಮಾಧ್ಯಮವಾಗಿ ಬಳಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಮಾನವ ಸಂಪನ್ಮೂಲ ಅಧಿಕಾರಿಗಳೂ ಸೇರಿದಂತೆ ನಿರ್ಧಾರ ಕೈಗೊಳ್ಳುವ ಹಂತದ ಅಧಿಕಾರಿಗಳಿಗೂ ಕನ್ನಡ ಬದ್ಧತೆ ಇರಬೇಕು. ಕನ್ನಡದ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಕೈಗಾರಿಕಾ ವಲಯದಲ್ಲಿ ಹೆಚ್ಚಾಗಿದೆ. ಪ್ರತಿ ಕೆಲಸದಲ್ಲೂ ಪ್ರೇರಣೆ ಮತ್ತು ಗುರುತಿಸುವಿಕೆಯನ್ನು ಅಪೇಕ್ಷಿಸುವ ಉದ್ಯೋಗಿವರ್ಗ ತಮ್ಮ ಮಾತೃಭಾಷೆಯಲ್ಲಿ ವ್ಯವಹರಿಸುವ ಅಧಿಕಾರಿಗಳೊಂದಿಗೆ ಹೆಚ್ಚು ಬೆರೆತುಕೊಳ್ಳುತ್ತಾರೆ. ದಿನಕಳೆದಂತೆ ಸ್ಥಳೀಯ ವೈಚಾರಿಕತೆಯನ್ನು ತೊರೆದು ವಿದೇಶದ ಅವಶ್ಯಕತೆಗಳಿಗೆ ಕಾರ್ಯ ನಿರ್ವಹಿಸುವುದು ಹೆಚ್ಚಾದ ಹಾಗೆ ಕನ್ನಡವು ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯ. ಇಂತಹ ಸನ್ನಿವೇಶದಲ್ಲಿ ಕನ್ನಡ ಭಾಷೆ ಮರು ಸ್ಥಾಪನೆ ಆಗಬೇಕು. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೂಡಾ ಕೈಗಾರಿಕೆಗಳಲ್ಲಿ ಕನ್ನಡ ವಾತಾವರಣ ನಿರ್ಮಾಣ ಮಾಡುವ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಗಳೂ ಇಂಥಾ ಕಾರ್ಯಕ್ರಮಗಳಿಗೆ ಹೆಚ್ಚು ಸಹಕಾರ ಮತ್ತು ಅವಕಾಶಗಳನ್ನು ಒದಗಿಸಿಕೊಡಬೇಕು.

ಕನ್ನಡ ಭಾಷೆ, ನಾಡು–ನುಡಿ ಕಾಪಾಡುವ ನಿಟ್ಟಿನಲ್ಲಿ ಒಂದು

.....ಪುಟ ೧೩ ಕ್ಕೆ

# ಕನ್ನಡದ ಕೆಲಸಕ್ಕೆ ಕೊನೆ ಎಂಬುದೇ ಇಲ್ಲ...


>> ೨ನೇ ಪುಟದಿಂದ...

ಎಂದು ಪರಿಷತ್ತು ಧ್ವನಿ ಎತ್ತಿತು. ಸರ್ಕಾರದ ಈ ನಿಲುವು ಕೇವಲ ಕನ್ನಡ ಭಾಷೆಗೆ ಮಾತ್ರ ಮಾರಕವಾಗಿಲ್ಲ; ಮೊದಲೇ ಉದ್ಯೋಗ ಅವಕಾಶ ವಂಚಿತರಾದ ಕನ್ನಡ ಅಧ್ಯಾಪಕರ ಕೆಲಸಕ್ಕೂ ಸಂಚಕಾರ ತರುವಂಥದಾಗಿದೆ. ಅದೃಷ್ಟಕ್ಕೆ ಸರ್ಕಾರ ಸ್ಪಷ್ಟೀಕರಣ ನೀಡಿದ್ದು, ಕನ್ನಡ ಕಲಿಕೆಯನ್ನು ಕೇವಲ ಒಂದು ವರ್ಷಕ್ಕೆ ಸೀಮಿತಗೊಳಿಸುವುದಿಲ್ಲ ಎಂದು ತಿಳಿಸಿದೆ.

ಹೀಗೆ, ಕನ್ನಡದ ಕೆಲಸ ಎನ್ನುವುದು ಒಂದು ನಿರಂತರ ಕೈಂಕರ್ಯ. ಆ ಕೈಂಕರ್ಯಕ್ಕೆ ಅರ್ಧ ವಿರಾಮಗಳು ಮತ್ತು ಅಲ್ಪ ವಿರಾಮಗಳು ಮಾತ್ರ ಇರುತ್ತವೆ; ಪೂರ್ಣ ವಿರಾಮ ಎನ್ನುವುದು ಇರುವುದಿಲ್ಲ. ಅದರಲ್ಲಿಯೂ ವಸಾಹತುಶಾಹಿ ಪರಂಪರೆಯ ಇಂಗ್ಲಿಷ್ ಮತ್ತು ದೇಶೀಯ ಹಿಂದಿ ಭಾಷೆಯ ಆಕ್ರಮಣದ ನಡುವೆ ರಾಜ್ಯ ಭಾಷೆಗಳು ನಿರಂತರವಾಗಿ ಆತಂಕವನ್ನು ಎದುರಿಸುತ್ತಲೇ ಇರಬೇಕಾಗುತ್ತದೆ. ಇದು ಕೇವಲ ಕನ್ನಡದ ಸಮಸ್ಯೆಯಲ್ಲ. ಎಲ್ಲ ರಾಜ್ಯ ಭಾಷೆಗಳ ಸಮಸ್ಯೆ. ಹೀಗಾಗಿ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ರಾಜ್ಯ ಭಾಷೆಗಳ ಉಳಿವಿಗಾಗಿ, ಏಳಿಗೆಗಾಗಿ ಒಂದು ವೇದಿಕೆಯನ್ನು ನಿರ್ಮಿಸಿಕೊಳ್ಳಬೇಕು. ಆಗಾಗ ಸಭೆ ಸೇರಬೇಕು. ಚರ್ಚೆ ಮಾಡಬೇಕು. ಎಲ್ಲ ರಾಜ್ಯಭಾಷೆಗಳ ಪರವಾಗಿ ಕೇಂದ್ರದ ಮೇಲೆ ಒತ್ತಡ ಹೇರಬೇಕು. ಇಂಥ ಒತ್ತಡಕ್ಕೆ ಕೇಂದ್ರ ಸರ್ಕಾರ ಖಂಡಿತ ಮಣಿಯುತ್ತದೆ ಎಂದು ನಾನು ನಂಬಿದ್ದೇನೆ. ಭಾಷೆ ಉಳಿದರೆ ನಮ್ಮ ಸಂಸ್ಕೃತಿ ಉಳಿಯುತ್ತದೆ.

ಮುಗಿಸುವ ಮುನ್ನ ಒಂದು ಮಾತನ್ನು ಇಲ್ಲಿ ದಾಖಲಿಸಬೇಕು ಎಂದು ಅನಿಸುತ್ತದೆ. ಆಗಸ್ಟ್ ೧೫ ರ ಸ್ವಾತಂತ್ರ್ಯ ದಿನವೇ ಇರಲಿ ಮತ್ತು ಜನವರಿ ೨೬ ರ ಗಣರಾಜ್ಯ ದಿನವೇ ಇರಲಿ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ರಾಷ್ಟ್ರ ಧ್ವಜ ಹಾರಿಸಿ ಸಿಹಿ ಹಂಚುವ ಪದ್ಧತಿ ಇರಲಿಲ್ಲ. ನಾಲ್ಕನೇ ದರ್ಜೆ ನೌಕರರೊಬ್ಬರು ಧ್ವಜ ಹಾರಿಸುತ್ತಿದ್ದರು. ನಾನು ಅಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಂಡ ಕೂಡಲೇ ಈ ಎರಡೂ ಪರ್ವ ದಿನಗಳಂದು ಪರಿಷತ್ತಿನಲ್ಲಿ ರಾಷ್ಟ್ರಧ್ವಜ ಹಾರಿಸಿ ಗೌರವ ಸಲ್ಲಿಸುವ, ಸಿಹಿ ಹಂಚುವ ಪರಂಪರೆಯನ್ನು ಆರಂಭಿಸಿದೆ. ದೇಶಕ್ಕೆ ಹೀಗೆ ಗೌರವ ಸಲ್ಲಿಸಿದ ಹಾಗೆಯೇ ನಾಡು ನುಡಿಗೂ ಗೌರವ ಸಲ್ಲಿಸುತ್ತ ಇರಬೇಕಾಗಿದೆ. ರಾಷ್ಟ್ರಕವಿ ಕುವೆಂಪು ಅವರು ಹೇಳಿದ ಹಾಗೆ ನಾವು ಎಲ್ಲರೂ ಕನ್ನಡಕ್ಕಾಗಿ ಕೈ ಎತ್ತೋಣ, ಕನ್ನಡಕ್ಕಾಗಿ ಕೊರಳು ಎತ್ತೋಣ. ಕನ್ನಡ ಭಾಷೆಯ ಕೆಲಸಕ್ಕಾಗಿ ಕಂಕಣ ತೊಡೋಣ ಎಂದು ಹೇಳುತ್ತ ವಿರಮಿಸುತ್ತಿದ್ದೇನೆ. ಇದುವರೆಗೆ ತಾವು ಕನ್ನಡಿಗರು ತೋರಿದ ಪ್ರೀತಿ ವಿಶ್ವಾಸಕ್ಕಾಗಿ ನಾನು ಋಣಿಯಾಗಿದ್ದೇನೆ. ನತಮಸ್ತಕನಾಗಿದ್ದೇನೆ.

ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ



**(ನಾಡೋಜ ಡಾ. ಮನು ಬಳಿಗಾರ್)**
ಅಧ್ಯಕ್ಷರು

# ಸುನೀಲ್ ಕುಮಾರ್ ಮಾದರಿಗೆ ಕ.ಸಾ.ಪ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅಭಿನಂದನೆ



ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರ ಸಂಪುಟಕ್ಕೆ ಸೇರಿರುವ ನೂತನ ಸಚಿವರಾದ ಶ್ರೀ ವಿ. ಸುನೀಲ್ ಕುಮಾರ್ ಅವರು ತಮಗೆ ಅಭಿನಂದಿಸಲು ಬರುವವರು ಹಾರ ತುರಾಯಿ ತರುವುದು ಬೇಡ, ಅದರ ಬದಲಿಗೆ ಪುಸ್ತಕ ತರಲಿ ಎಂದು ಹೇಳಿರುವುದು ಅತ್ಯಂತ ಶ್ಲಾಘನೀಯ ನಡೆ ಎಂದು ಕೊಂಡಾಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಸಚಿವರ ಈ ನಿಲುವು ಕನ್ನಡದಲ್ಲಿ ಪುಸ್ತಕ ಸಂಸ್ಕೃತಿ ಬೆಳೆಸುವಲ್ಲಿ ಒಂದು ಮಹತ್ತರ ಹೆಜ್ಜೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕನ್ನಡ ಪುಸ್ತಕೋದ್ಯಮ ಬಿಕ್ಕಟ್ಟಿನಲ್ಲಿ ಇರುವ ಇಂಥ ಸಂದರ್ಭದಲ್ಲಿ ಸಚಿವರು ಆಡಿರುವ ಈ ಮಾತು ಕೇವಲ ಪುಸ್ತಕೋದ್ಯಮಕ್ಕೆ ಚೈತನ್ಯದಾಯಿ ಮಾತ್ರವಲ್ಲ; ಅದು ಗ್ರಂಥಾಲಯ ಚಳವಳಿ ಹಬ್ಬುವುದಕ್ಕೂ ಪೂರಕವಾಗಿದೆ. ತಮ್ಮನ್ನು ಅಭಿನಂದಿಸಲು ಬರುವ ಜನರು ಕೊಡುವ ಪುಸ್ತಕಗಳನ್ನು ತಮ್ಮ ಮತಕ್ಷೇತ್ರವಾದ ಕಾರ್ಕಳದ ಗ್ರಂಥಾಲಯಕ್ಕೆ ಕೊಡುವುದಾಗಿಯೂ ಸಚಿವರು ಹೇಳಿದ್ದಾರೆ. ಇದು ಎಲ್ಲ ಸಚಿವರಿಗೂ ಮಾದರಿಯಾಗಿದ್ದು ಎಲ್ಲ ಸಚಿವರೂ ಇದನ್ನು ಅನುಸರಿಸಬೇಕು ಎಂದು ಬಳಿಗಾರ್ ಅವರು ಕರೆ ಕೊಟ್ಟಿದ್ದಾರೆ. ಇಂಥ ಕನ್ನಡ ಮತ್ತು ಪುಸ್ತಕ ಪ್ರೀತಿಯ ಸಚಿವರಿಗೆ ಕನ್ನಡ ಹಾಗೂ ಸಂಸ್ಕೃತಿ ಖಾತೆಯನ್ನು ವಹಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಡಾ. ಮನು ಬಳಿಗಾರ್ ಅಭಿನಂದಿಸಿದ್ದಾರೆ.

ಶ್ರೀ ಸುನೀಲ್ ಕುಮಾರ್ ಅವರ ಕಾಲದಲ್ಲಿ ಕನ್ನಡ ಭಾಷೆ, ಕನ್ನಡ ನುಡಿ ಮತ್ತು ಕನ್ನಡ ಪುಸ್ತಕಗಳು ಇನ್ನಷ್ಟು ಸಮೃದ್ಧವಾಗಿ ಬೆಳೆಯಲಿ ಎಂದು ಅವರು ಹಾರೈಸಿದ್ದಾರೆ. ಮಾನ್ಯ ಸಚಿವರು ಸೂಚಿಸುವ ಗ್ರಂಥಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಹಲವು ಅಮೂಲ್ಯ ಕೃತಿಗಳನ್ನು ಉಚಿತವಾಗಿ ಕಳುಹಿಸಿಕೊಡಲಿದೆ ಎಂದೂ ನಾಡೋಜ ಡಾ. ಮನು ಬಳಿಗಾರ್ ಅವರು ತಿಳಿಸಿದ್ದಾರೆ. ■

## ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
ಸ್ಥಾಪನೆ : ೧೯೧೫
http://www.kasapa.in e-mail : kannadaparishattu@gmail.com

ಕ್ರಮಸಂಖ್ಯೆ : ಕಸಾಪ/ವ್ಯ.ವಿ./೨೦೨೧–೨೨ **ದಿನಾಂಕ ೨೯–೭–೨೦೨೧**

### ಕನ್ನಡ ಸಾಹಿತ್ಯ ಭವನಗಳ ಉಸ್ತುವಾರಿ ಸಮಿತಿ


**ದಿನಾಂಕ ೧೩–೦೭–೨೦೨೧ ರಂದು** ಮಂಗಳವಾರ ಮಧ್ಯಾಹ್ನ ೩–೦೦ ಗಂಟೆಗೆ ಪಂಪ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರಾದ **ನಾಡೋಜ ಡಾ. ಮನು ಬಳಿಗಾರ್** ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯದಂತೆ, ಕನ್ನಡ ಸಾಹಿತ್ಯ ಭವನ ಉಸ್ತುವಾರಿ ಸಮಿತಿಯನ್ನು ರಚಿಸಲಾಯಿತು. ಈಗಾಗಲೇ ಇಂತಹ ಸಮಿತಿ ಇದ್ದರೆ, ಹೊಸದಾಗಿ ಸಮಿತಿಯನ್ನು ರಚಿಸಬೇಕಾಗಿಲ್ಲ.

| | | |
|---|---|---|
| **ಅಧ್ಯಕ್ಷರು** | : | **ಕಸಾಪದ ಜಿಲ್ಲಾ ಅಧ್ಯಕ್ಷರುಗಳು** |
| **ಗೌರವ ಕಾರ್ಯದರ್ಶಿ** | : | **ಕಸಾಪದ ತಾಲ್ಲೂಕು ಅಧ್ಯಕ್ಷರು** |
| **ಗೌರವ ಕೋಶಾಧ್ಯಕ್ಷರು** | : | **ಕಸಾಪದ ಜಿಲ್ಲಾ ಕೋಶಾಧ್ಯಕ್ಷರು** |
| **ಆಹ್ವಾನಿತ ಸದಸ್ಯರು** | : | **ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| | : | **ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್** (ಜಿಲ್ಲಾ ಕೇಂದ್ರಗಳಲ್ಲಿನ ನಗರ ಪ್ರದೇಶದ ಕನ್ನಡ ಭವನಗಳಿಗೆ) |
| | : | **ಜಿಲ್ಲಾ ಪಂಚಾಯತಿಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್** (ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯತ್/ಗ್ರಾಮೀಣ ಭಾಗದ ವ್ಯಾಪ್ತಿಯ ಕನ್ನಡ ಭವನಗಳಿಗೆ) |
| **ನಾಮಕರಣ ಸದಸ್ಯರು** | : | ಇಬ್ಬರು ಸಾಹಿತಿಗಳು–ಆ ಜಿಲ್ಲೆಯಿಂದ (ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅನುಮತಿ ಪಡೆದು) |

| | | |
|---|---|---|
| (ಕೆ. ರಾಜಕುಮಾರ್) | (ಪಿ. ಮಲ್ಲಿಕಾರ್ಜುನಪ್ಪ) | (ನಾಡೋಜ ಡಾ. ಮನು ಬಳಿಗಾರ್) |
| ಗೌರವ ಕಾರ್ಯದರ್ಶಿ | ಗೌರವ ಕೋಶಾಧ್ಯಕ್ಷರು | ಅಧ್ಯಕ್ಷರು |

# ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿ ಕಿತ್ತೂರು ರಾಣಿ ಚೆನ್ನಮ್ಮ

**ಕಿತ್ತೂರ ಕಲಿಗಳ ಮಾತೃಭೂಮಿ ರಕ್ಷಣೆಯ ಹೋರಾಟಕ್ಕೆ, ದೇಶದ ಪ್ರಥಮ ಸ್ವಾತಂತ್ರ್ಯ ಸಮರಕ್ಕೆ ಅಪೂರ್ವ ಜಯವಾಯಿತು. ರಾಣಿ ಚೆನ್ನಮ್ಮ ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿಯೆನಿಸಿದಳು. ಮುಂದಿನ ಹೋರಾಟಗಳಿಗೆ ದಾರಿದೀಪವಾಗಿ ಧೃವತಾರೆಯಂತೆ ಮಿನುಗ ತೊಡಗಿದಳು.**



- ನಾಡೋಜ ಡಾ. ಮನು ಬಳಿಗಾರ್

ವಿಶ್ವದ ಇತಿಹಾಸದಲ್ಲಿ ತಾಯ್ನಾಡಿನ ರಕ್ಷಣೆಗಾಗಿ ಸ್ವತಃ ರಣರಂಗಕ್ಕಿಳಿದು ಯುದ್ಧ ಮಾಡಿದ ಮಹಿಳಾ ಮಣಿಗಳು ಅತ್ಯಂತ ವಿರಳ. ಫ್ರಾನ್ಸಿನ ಜೋನ್ ಆಫ್ ಆರ್ಕ್ ಒಬ್ಬಳನ್ನು ಬಿಟ್ಟರೆ, ಭಾರತವನ್ನು ಹೊರತುಪಡಿಸಿ, ಜಗತ್ತಿನ ಇತಿಹಾಸ ಪುಟಗಳಲ್ಲಿ ಬೇರಾವ ವನಿತೆಯೂ ಟೊಂಕಕಟ್ಟಿ ಯುದ್ಧ ಮಾಡಿದ್ದಿಲ್ಲ. ಆದರೆ ನಮ್ಮ ದೇಶದಲ್ಲಿ ಇಂತಹ ಶೂರ ಸ್ತ್ರೀ ರತ್ನಗಳ ಖಣಿಯೇ ಇದೆ ಎಂಬುದನ್ನು ನೆನೆದಾಗ ನಮಗೆ ಅತೀವ ಹೆಮ್ಮೆ ಹಾಗೂ ಹರ್ಷವಾಗುತ್ತದೆ. ವೀರರಾಣಿ ಕಿತ್ತೂರು ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಲಖನೌದ ಬೇಗಂ ಹಜರತ್ ಮಹಲ್, ರಾಣಿ ಅಬ್ಬಕ್ಕ, ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ, ಒನಕೆ ಓಬವ್ವ ಹೀಗೆಯೇ ಮುಂತಾದವರನ್ನು ಅಭಿಮಾನದಿಂದ ಹೆಸರಿಬಹುದಾಗಿದೆ.

ಇದೇ ಅಕ್ಟೋಬರ್ 23ಕ್ಕೆ ಸರಿಯಾಗಿ 177 ವರ್ಷಗಳ ಹಿಂದೆ, ಅಂದರೆ 1824ರಲ್ಲಿ ರಾಣಿ ಚೆನ್ನಮ್ಮ ತನ್ನ ಸಾಮ್ರಾಜ್ಯದ ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಬಲ ಬ್ರಿಟಿಷರ ವಿರುದ್ಧ ಯುದ್ಧ ಮಾಡಿದ್ದಷ್ಟೇ ಅಲ್ಲ ಜಯವನ್ನೂ ಸಾಧಿಸಿದ್ದು ನಮಗೆ ರೋಮಾಂಚನ ಉಂಟು ಮಾಡುವ ಸಂಗತಿಯಾಗಿದೆ. ಈ ಹೊತ್ತಿನಲ್ಲಿ ಚೆನ್ನಮ್ಮನ ಮಾತೃಭೂಮಿ ರಕ್ಷಣೆಯ ಹೋರಾಟದ ಕೆಲಕ್ಷಣಗಳನ್ನು ಸ್ಮರಿಸಿಕೊಳ್ಳೋಣ.


ಕಿತ್ತೂರು ಇಂದಿನ ಪುಣೆ ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ನಂಬರ್ 4ರ ಮೇಲೆ ಬೆಳಗಾವಿಯಿಂದ 45 ಕಿ.ಮಿ. ದಕ್ಷಿಣಕ್ಕೂ ಧಾರವಾಡದಿಂದ 30 ಕಿ.ಮಿ. ಉತ್ತರಕ್ಕೂ ಇರುವ ಒಂದು ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ಇದೇ ಹೆದ್ದಾರಿ ಮೇಲಿರುವ ಮುಂಬಯಿ ಬಳಿಯ ಸೋಪಾರ, ಕೊಲ್ಲಾಪುರ, ಮುಗುಟಖಾನ ಹುಬ್ಬಳ್ಳಿ ಇಂದಿನ ಬೆಳಗಾವಿಯ ಮಾಧವಪುರ ಹಾಗೂ ವಡಗಾಂವ್, ಸ್ವಲ್ಪ ದಕ್ಷಿಣದ ಬದಿಗಿರುವ ಬನವಾಸಿ, ಹಾನಗಲ್, ಚಿತ್ರದುರ್ಗದ ಚಂದ್ರವಳ್ಳಿ ಮುಂತಾದ ಪಟ್ಟಣಗಳು ಕ್ರಿಸ್ತಪೂರ್ವದಲ್ಲಿಯೇ ರೋಂ ವರ್ತಕರೊಡನೆ ಸಂಪರ್ಕವನ್ನಿಟ್ಟುಕೊಂಡದ್ದನ್ನು ಅಲ್ಲಲ್ಲಿ ನಡೆದ ಉತ್ಖನನಗಳ ಶಿಲಾ ಲೇಖನಗಳು ತೋರಿಸಿಕೊಡುತ್ತವೆ. ಅಂತೆಯೇ ಈ ಪ್ರಾಚೀನ ಮುಖ್ಯ ರಸ್ತೆಯಲ್ಲಿರುವ ಕಿತ್ತೂರಿನ ಬಗೆಗೂ ಇಂತಹ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವೆಂದು ಇತಿಹಾಸ ತಜ್ಞರು ಅಭಿಪ್ರಾಯಪಡುತ್ತಾರೆ. ಯಾಕೆಂದರೆ 16 ರಿಂದ 19ನೆಯ ಶತಮಾನದ ನಡುವೆ ಒಂದು ಸಾಮ್ರಾಜ್ಯ ಕೇಂದ್ರವಾಗಿ ಮೆರೆದ ಕಿತ್ತೂರು ಅದಕ್ಕೂ ಪೂರ್ವದಲ್ಲಿಯೂ ಒಂದು ಮಹತ್ವದ ಸ್ಥಳವಾಗಿರಬಹುದೆಂದು ಊಹಿಸಲಾಗಿದೆ.

ಪ್ರಾರಂಭದಲ್ಲಿ ಮುಗುಟಖಾನ ಹುಬ್ಬಳ್ಳಿ ಹಾಗೂ ಸಂಪಗಾಂವಗಳು ಕಿತ್ತೂರು ಸಂಸ್ಥಾನದ ಆಡಳಿತ ಕೇಂದ್ರಗಳಾಗಿದ್ದು 1682ರ ಸುಮಾರಿನಲ್ಲಿ ಈ ನಾಡನ್ನು ಆಳಿದ ಐದನೆಯ ಅರಸು ಅಲ್ಲಪ್ಪಗೌಡ ಸರ್ ದೇಸಾಯಿಯು ಕಿತ್ತೂರನ್ನು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು. ಇವನ ಕಾಲದಲ್ಲಿಯೇ ಅಂದರೆ 1660 ರಿಂದ 1691 ರಲ್ಲಿ ಈಗ ಪಾಳು ಬಿದ್ದಿರುವ ಕಿತ್ತೂರಿನ ಕೋಟೆ ನಿರ್ಮಾಣವಾಯಿತು. ಇದು ಎಷ್ಟೊಂದು ಪ್ರಬಲವಾಗಿತ್ತು ಎಂಬುದನ್ನು 1824ರ ಡಿಸೆಂಬರ್ 5 ರಂದು ಕಿತ್ತೂರ ಮೇಲೆ 2ನೆಯ ಬಾರಿ ದಂಡೇರಿ ಬಂದ ಆಂಗ್ಲ ಸೈನ್ಯದ ನೇತಾರ ಚಾಪ್ಲಿನ್ "Strong forts of Kittur, defended they were by a garrision of an unusually determined character and spirit and energy are far above my praise" ಎಂದು ಮುಕ್ತವಾಗಿ ಹೊಗಳಿದ್ದಾನೆ.



ಕಿತ್ತೂರನ್ನು ಆಳಿದ ಹಲವಾರು ಅರಸರಲ್ಲಿ ಏಳನೆಯವನಾದ ರುದ್ರಗೌಡ ಅಲಿಯಾಸ ಫಕೀರ ರುದ್ರಗೌಡ ಸರ್ಜನ ಜೀವನ ಶೈಲಿ ವಿಶೇಷವಾಗಿದೆ. ತನ್ನ ನಿಷ್ಠಾವಂತ ರಾಣಿಯನ್ನಲ್ಲದೇ ಈತ ರಂಜನಾ ಎಂಬ ಬಲು ಸುಂದರಿಯಾದ ಪ್ರೇಯಸಿಯೊಬ್ಬಳನ್ನು ಹೊಂದಿದ್ದನು. ಈಕೆ ಮೂಲತಃ ಮುಸಲ್ಮಾನ ಧರ್ಮದವಳು. ಈ ಅರಸನು ಈಕೆಯನ್ನು ವೀರಶೈವ

ಧರ್ಮಕ್ಕೆ, ಸ್ವಾಮೀಜಿ ಒಬ್ಬರಿಂದ ಲಿಂಗದೀಕ್ಷೆ ಮಾಡಿಸಿ ಮತಾಂತರಿಸಿ 'ನಿರಂಜನಿ' ಎಂಬ ಹೆಸರನ್ನು ಕೊಟ್ಟನು. ಇವಳಿಗೋಸ್ಕರವೇ ದೇಶನೂರಿನಲ್ಲಿ ಒಂದು ಅಂದವಾದ ಚಿಕ್ಕ ಅರಮನೆಯನ್ನು ಕಟ್ಟಿಸಿದನು. ಈಗಲೂ ದೇಶನೂರಿನಲ್ಲಿ ಈ ನಿರಂಜನಿ ಮಹಲ್ ಅನ್ನು ನಾವು ನೋಡಬಹುದಾಗಿದೆ. ಸಮೀಪದ ಗುಡ್ಡದ ಮೇಲೆ ಈತ ಕಟ್ಟಿಸಿದ ಕೋಟೆಯನ್ನು ರುದ್ರಗಡವೆಂದೇ ಕರೆಯಲಾಗುತ್ತದೆ. ಇವನ ನಂತರ ಪಟ್ಟಕ್ಕೆ ಬಂದ ದೊರೆ ಮಲ್ಲಸರ್ಜನೇ ರಾಣಿ ಚೆನ್ನಮ್ಮನ ಪತಿ. ಈತ ಶೂರನೂ ಪರಾಕ್ರಮಿಯೂ ಆಗಿದ್ದನು. ಇದಕ್ಕೆ ಮೆಚ್ಚಿ ಅವರೊಡನೆ ಒಪ್ಪಂದ ಮಾಡಿಕೊಂಡಿದ್ದ ಪೇಶ್ವೆಯವರು, ಈತನಿಗೆ 'ಪ್ರತಾಪ್ ರಾವ್' ಎಂಬ ಬಿರುದನ್ನು ಕೊಟ್ಟಿದ್ದರು. ಈ ನೆನಪಿಗಾಗಿ ಮಲ್ಲಸರ್ಜನು ನಂದಗಡದಲ್ಲಿ ಕೋಟೆಯೊಂದನ್ನು ಕಟ್ಟಿದನು. ಈಗಲೂ ಇದಕ್ಕೆ ಪ್ರತಾಪ್‌ಗಡ ಎಂದೇ ಕರೆಯಲಾಗುತ್ತದೆ.



ಮಲ್ಲಸರ್ಜನ ನಂತರ ಅವನ ಮಗ (ಹಿರಿಯ ರಾಣಿ ರುದ್ರಮ್ಮನ ಮಗ) ಶಿವಲಿಂಗರುದ್ರಸರ್ಜನು ಪಟ್ಟಕ್ಕೆ ಬಂದನು. 1816 ರಿಂದ ಆಡಳಿತ ಪ್ರಾರಂಭಿಸಿದ ಈತ 1824ರಲ್ಲಿ ತೀರಿಕೊಂಡನು. ಈತನಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಈತ ಮಾಡಿಕೊಂಡ ದತ್ತಕವನ್ನು ಮಾನ್ಯ ಮಾಡದೇ ಬ್ರಿಟೀಷರು ಕಿತ್ತೂರನ್ನು ಕಬಳಿಸಲು ಹವಣಿಸಿದರು. ಆದರೆ ಈತನ ಮಲತಾಯಿ ಚೆನ್ನಮ್ಮ ರಾಣಿಯ ಮಧ್ಯ ಪ್ರವೇಶದಿಂದ ಅದು ಒಮ್ಮೆಲೆ ಸಾಧಿಸಲಾಯಿತು.

ಹೀಗೆ ಪ್ರಬಲ ಬ್ರಿಟೀಷರಿಗೆ ಸವಾಲೊಡ್ಡಿದ ಎದೆಗಾರ್ತಿ ಚೆನ್ನಮ್ಮ ಹುಟ್ಟಿದ್ದು ಬೆಳಗಾವಿ ಸಮೀಪ ಉತ್ತರಕ್ಕಿರುವ ಕಾಕತಿಯ ದೇಸಾಯಿಯವರ ಮನೆತನದಲ್ಲಿ ರಾಜವಂಶಜರಿಗೆ ತಕ್ಕಂತ ಶಿಕ್ಷಣ ತರಬೇತಿ ಚಿಕ್ಕಂದಿನಲ್ಲಿ ಚೆನ್ನಮ್ಮನಿಗೆ ಆಯಿತು. ಅದನ್ನು ವಿವರಿಸುವ ಒಂದು ಜಾನಪದ :

**ಕಾಡಿಗೆ ತಂದಿ ಜತೆಗೂಡಿ ! ಕುದುರಿ ಸವಾರಿ ಮಾಡಿ**
**ಹೋಗುತ್ತಿದ್ದ ಜೋಡಿ । ಹುಲಿ ಚಿರ್ಚ ಹೊಡಿಯೋಳು ಗುರಿ ಮಾಡಿ ॥**
**..... ತುಂಬಿದ ಹೊಳಿ ದಾಟೂಳ ಈಸಾಡಿ.... ಹೀಗೆ ವರ್ಣಿಸಿದೆ.**
**ಇನ್ನು ಚೆನ್ನಮ್ಮನ ರೂಪ ಹಾಗೂ ಸೌಂದರ್ಯ ಸಿರಿ ಬಗ್ಗೆ**
**ಮಲ್ಲಸರ್ಜನ ನಾರಿ ಮೂಲೋಕ ಸುಂದರಿ**
**ಮಾಲೊಳಗೆ ರತ್ನದಾ ಹರಳ । ಕೋ । ಚೆನ್ನಮ್ಮ**
**ಆರೂತಿ ಬೆಳಕ ನಗಿಯಾರೆ ॥ ಕೊ॥**
**ಕಾಕತಿ ದೊರೆಗಳ ತಾಕತು ಸಿರಿಮಗಳು**
**ಬೇಕಾದ ಮಡದಿ ಮಲ್ಲಸಜ್ಜಗ ॥ಕೊ॥ ಚೆನ್ನಮ್ಮ**
**ನಾಕು ದಿಕ್ಕಿಗೆ ಮನ್ನಣೆ ॥ ಕೊ॥ ಎಂದಿದೆ.**

ಮತ್ತು ಶ್ರೀಧರ್ ತೇಲ್ಕರ್ ಎಂಬ ವಿದ್ವಾಂಸರ ಒಂದು ಲೇಖನದ ಪ್ರಕಾರ ಚೆನ್ನಮ್ಮ ರಾಣಿಗೆ ಚಿಕ್ಕಂದಿನಲ್ಲಿಯೇ ಕನ್ನಡದೊಡನೆಯೇ ಉರ್ದು=ಮರಾಠಿ ಭಾಷೆಗಳನ್ನೂ ಕಲಿಸಲಾಯಿತು. ಬಸವಪುರಾಣ, ರಾಮಾಯಣ, ಮಹಾಭಾರತಗಳಲ್ಲಿ ಹಾಗೂ ಇತಿಹಾಸ ಕಲಿಯುವಿಕೆಯಲ್ಲಿ ಅವಳಿಗೆ ವಿಶೇಷ ಆಸಕ್ತಿಯಿತ್ತು. ಇತ್ತೀಚಿನ ಸಂಶೋಧನೆಗಳ ಪ್ರಕಾರ ಚೆನ್ನಮ್ಮನಿಗೆ ಇಂಗ್ಲೀಷಿನ ವ್ಯವಹಾರಿಕ ಜ್ಞಾನವೂ ಇತ್ತೆಂದು ತಿಳಿದು ಬರುತ್ತದೆ. ಹೀಗೆ ಪಟ್ಟದರಸಿಯ ಎಲ್ಲ ಗುಣಧರ್ಮ ಹೊಂದಿದ್ದ ಚೆನ್ನಮ್ಮ ತನ್ನ ಭಾವಿ ಪತಿರಾಜನನ್ನು ಪ್ರಥಮದಲ್ಲಿ ಸಂದಿಸಿದ್ದೂ ಕಾಡಿಗೆ ಹುಲಿ ಬೇಟೆಗಾಗಿ ಹೋದಾಗಲೇ. ಮೊದಲ ಪತ್ನಿಗೆ ಮಕ್ಕಳಾಗದಿದ್ದಾಗ ಮಲ್ಲಸರ್ಜ ದೊರೆ ಚೆನ್ನಮ್ಮನನ್ನು ಎರಡನೆಯ ಪತ್ನಿಯಾಗಿ ಸ್ವೀಕರಿಸಿದನು. ಕಾಕತಿಯ ಕನ್ಯೆ ಕಿತ್ತೂರಿನ ರಾಣಿಯಾಗಿ ಅರಮನೆ ಪ್ರವೇಶಿಸಿದಳು. (1790–91). ಅಲ್ಲಿಯೂ ತನ್ನ ವಿಶಾಲ ಮನೋಭಾವ, ಚಾಣಾಕ್ಷ ಬುದ್ಧಿಯಿಂದ ಎಲ್ಲರ ಮನವನ್ನೂ ಗೆದ್ದು ಪ್ರಶಂಸೆಗೆ ಪಾತ್ರಳಾದಳು. ಕಿತ್ತೂರರಸರ ಪ್ರಜಾವಾತ್ಸಲ್ಯಕ್ಕೆ ಸಾಕ್ಷಿಯಾಗಿ ಅನೇಕ ಜನಪರ ಕಾರ್ಯಗಳನ್ನು ಕೈಗೊಂಡಳು. ಇದನ್ನೆ, ಒತ್ತೆಯಾಳಾಗಿ ಕೆಲದಿನ ಕಿತ್ತೂರಿನಲ್ಲಿದ್ದು ಹೋದ ಈಲಿಯಟ್ ಎಂಬ ಬ್ರಿಟಿಷ್ ಅಧಿಕಾರಿ "The Desais cf Kittur had always been regarded with affection by the poorer classes in their country..." ಎಂದು ಹೊಗಳಿದ್ದಾನೆ.

ಚೆನ್ನಮ್ಮನ ಪತಿ ದೊರೆ ಮಲ್ಲಸರ್ಜನು 1816ರಲ್ಲಿ ತೀರಿಕೊಂಡಾಗ ಶಿವಲಿಂಗ ಸರ್ಜನಿಗೆ ಪಟ್ಟಕಟ್ಟಲಾಯಿತು. ತಂದೆಯಂತೆಯೇ ಈತನೂ ಉತ್ತಮ ಆಡಳಿತಗಾರನಾಗಿದ್ದನು. 1824ರಲ್ಲಿ ಈತ ತೀರಿಕೊಳ್ಳುವ ತುಸುವೊದಲು ದತ್ತಕ ಮಗನನ್ನೊಬ್ಬನನ್ನು ಮಾಡಿಕೊಂಡಿದ್ದ. ಇದು ಶಿವಲಿಂಗರುದ್ರಸರ್ಜನ ಸಮ್ಮತಿ ಇಲ್ಲದೇ ಆದ ದತ್ತಕವೆಂದು ನೆಪವೊಡ್ಡಿ ಕಿತ್ತೂರನ್ನು ಕಬಳಿಸಲು ಬ್ರಿಟೀಷರು ಹೊಂಚುಹಾಕಿದರು. ಚೆನ್ನಮ್ಮ ರಾಣಿ ಏನೇ ಆದರೂ ಪರಕೀಯರು ಕಿತ್ತೂರನ್ನು ವಶಪಡಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ಘಂಟಾಘೋಷವಾಗಿ ಸಾರಿ ಮಾತೃಭೂಮಿ ರಕ್ಷಣೆಗೆ ಎಲ್ಲ ತ್ಯಾಗಕ್ಕೂ ಸಿದ್ಧರಿರಬೇಕೆಂದು ಪ್ರಜೆಗಳನ್ನು ಹುರಿದುಂಬಿಸತೊಡಗಿದಳು. ಧಾರವಾಡದ ಕಲೆಕ್ಟರ್ ಆಗಿದ್ದ ಥಾಕರೆಯ ನೇತೃತ್ವದಲ್ಲಿ ಆಂಗ್ಲರ ಸೈನ್ಯ ಕಿತ್ತೂರನ್ನು ಅಕ್ಟೋಬರ್ 23 ರಂದು ಮುತ್ತಿಗೆ ಹಾಕಿತು. ಕಿತ್ತೂರ ಜನ ಚೆನ್ನಮ್ಮನ ಬೆಂಗಾವಲಿಗೆ ನಿಂತರು. ಜಾನಪದ ಚಕಳಿಯೊಂದು ಹೇಗೆ ಸಾರಿದೆ ನೋಡಿ ಈ ಜನರ ಮನೋಭೂಮಿಕೆಯನ್ನು :

**ಕಡಿಗೆ ನಿನ್ನ ಅನ್ನವನು ಉಂಡು ಇಂದಿಗೆ ।**
**ಬಿಡಬಲ್ಲೆವೆ ನಾವು ಸುಮ್ಮನೆ ಮಾ ।**
**ತೊಡೆಯ ಚಪ್ಪರಿಸಿ, ಮೀಸಿಯ ತಿದ್ದಿ ಮುಂಗೈ ।**
**ಕಡಿಯುತ ಮಾತಾಡುತಿರಲಾಗಿ ಮತ್ತೆ ॥**
**ನಾಳಿನ ಮರಣವು ಬರಲಿ ನಮಗೆ ಇಂದು**
**ಏಳುಸಾವಿರ ದಂಡುಪುರದಲ್ಲಿ ಮಾ ।**
**ವೇಳ್ಯೆ ವೇಳ್ಯೆಗೆ ಫೇರಿ ತಿರುಗುತಲಿದೆ ಮತ್ತೆ**
**ಕೇಳಿರಿ ಮುಂದಾದ ಮಾತನು ನೀವು ॥**
**ಗೆದ್ದ ಕಿತ್ತೂರ ತಂದು ಉದ್ದಬೀಳುವೆ ತಾಯಿ**
**ಕದ್ದ ಮಾತಲ್ಲ ನಿಮ್ಮಾಣೆ**
**ಕದ್ದ ಮಾತಲ್ಲ ನಿಮ್ಮಾಣೆ ! ಇರದಿರಕ**
**ಬಿದ್ದ ಹೋಗುವೆ ರಣದಾಗೊ ।**

ಪ್ರಜೆಗಳದ್ದು ಹೀಗಿದ್ದರೆ ಚೆನ್ನಮ್ಮನ ಬಗೆಗಿನ ಒಂದು ಪದ್ಯ ನೋಡಿ :

**ಕಿತ್ತೂರ ಚೆನ್ನಮ್ಮ ಸುತ್ತೂರ ಒಡತ್ಯಾಗಿ**
**ಕತ್ತಿ ಕವಚನಗಳ ಉಡುಪುಟ್ಟೋ**
**ಕತ್ತಿ ಕವಚಗಳ ಉಡುಪುಟ್ಟೊ... ಅಬ್ಬರದಿ**
**ಬತ್ತಲಗುದರೀಯ ಜಿಗಿದೇರೋ!**

ಹೀಗೆ ಸ್ವತಃ ಕತ್ತಿ ಕವಚಗಳ ತೊಟ್ಟು ರಣರಂಗಕ್ಕೆ ಧುಮಿಕಿದ ಚೆನ್ನಮ್ಮ ....

**ಚಂಡಿಯೋ ಚೌಡಿಯೋ ಮಾಯೆಯೊ ಮಸಣಿಯೋ ।**
**ಖಂಡಿತ ಮಾನವಳಿವಳಲ್ಲ ।**
**ಗಂಡುಗಲಿಗಳ ಮೀರಿ ರುಂಡವ ತುರಿವಳು**
**ಮಹಾಮಾಯಿಯಲ್ಲದೆ ಬ್ಯಾರೆಲ್ಲ ।**
**ಚನ್ನವ್ವ ತಾಳಿ ಶಕ್ತಿ ಅವತಾರ**
**ಉಗ್ರಕೋಪ ತಾಳ್ಯಾರು ಬಹುಭಾರ**
**ತೋಫ ಇತ್ತಬನೂರ**
**ಸರಬತ್ತಿ ಮಾಡಲೆಂಣಾ ಭರಭರ ।**

ಇದರಂತೆಯೇ ಆಯಿತು. ಯುದ್ಧದಲ್ಲಿ ಥ್ಯಾಕರೆ ಕೊಲ್ಲಲ್ಪಟ್ಟು ಆಂಗ್ಲರಿಗೆ ಭಾರಿ ಮುಖಭಂಗವಾಗುವಂತಹ ಸೋಲಾಯಿತು. ಕಿತ್ತೂರ ಕಲಿಗಳ ಮಾತೃಭೂಮಿ ರಕ್ಷಣೆಯ ಹೋರಾಟಕ್ಕೆ, ದೇಶದ ಪ್ರಥಮ ಸ್ವಾತಂತ್ರ್ಯ ಸಮರಕ್ಕೆ ಅಪೂರ್ವ ಜಯವಾಯಿತು. ರಾಣಿ ಚೆನ್ನಮ್ಮ ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿಯೆನಿಸಿದಳು. ಮುಂದಿನ ಹೋರಾಟಗಳಿಗೆ ದಾರಿದೀಪವಾಗಿ ಧೃವತಾರೆಯಂತೆ ಮಿನುಗ ತೊಡಗಿದಳು. ಅಂತೆಯೇ ಆಂಗ್ಲರು ಇವಳನ್ನು ತಮ್ಮ ಗುಪ್ತ ಪತ್ರಗಳಲ್ಲಿ .... a woman of violent and intermeddling disposition.. ಎಂದೂ ಹಾಗೂ ಕಿತ್ತೂರ ಸೈನಿಕರನ್ನು ಸ್ಟಿವನ್ಸನ್ ಎಂಬುವವನು... and they have now gone so far that they are determined to fight till the last, if attacked" ಎಂದು ಬಣ್ಣಿಸಿದ್ದಾನೆ. ಹೀಗೆ ವೈರಿಗಳಿಂದಲೇ ಶೂರರೂ ಧೀರರೂ ಎಂದು ಬಣ್ಣಿಸಿಕೊಂಡ ಹೆಮ್ಮೆ ಕಿತ್ತೂರ ನಾಡವರದು ಹಾಗೂ ಅವರ ಕಣ್ಮಣಿ ರಾಣಿ ಚೆನ್ನಮ್ಮನದು. ರಾಣಿ ಚೆನ್ನಮ್ಮ ಪರಾಕ್ರಮಿಯಾಗಿದ್ದಂತೆಯೇ ಅಪಾರ ಮಾತೃವಾತ್ಸಲ್ಯದವಳೂ ಆಗಿದ್ದಳು. ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ ಆಂಗ್ಲ ಸ್ತ್ರೀಯರು ಹಾಗೂ ಮಕ್ಕಳನ್ನು ವೈರಿಯಂತೆ ಕಾಣದೇ ಬಹಳ ಪ್ರೀತ್ಯಾದರ ತೋರಿದಳು. ವೈರಿಯ ಮಕ್ಕಳು ವೈರಿಗಳಲ್ಲ ಎಂಬ ಅವಳ ನಿಲುವು ಇಂದಿಗೂ ದೇಶದೇಶಗಳ ಸಂಬಂಧ ಹೇಗಿರಬೇಕು ಎಂಬುದಕ್ಕೆ ಮಾದರಿಯಾಗಿದೆ.

ಏನೇ ಆದರೂ ಕಿತ್ತೂರ ವಿಜಯೋತ್ಸವದ ಆ ಕ್ಷಣಗಳು ಬಹಳ ದಿನ ಮುಂದೊರೆಯಲಿಲ್ಲ. ಕೊಡಲಿ ಕಾವು ಕುಲಕ್ಕೆ ಮೃತ್ಯು ಎಂಬಂತೆ ಅಲ್ಲಿಯ ಕೆಲ ಸಮಯ ಸಾಧಕ ಸ್ವಾರ್ಥಿಗಳ ಪಿತೂರಿಯಿಂದಾಗಿ ಚೆನ್ನಮ್ಮನ ಯುದ್ಧ ರಹಸ್ಯಗಳನ್ನೆಲ್ಲ ಬ್ರಿಟೀಷರು ಪಡೆದುಕೊಂಡರು. ಮುಂದೆರಡು ತಿಂಗಳಲ್ಲಿ ಬೆಳಗಾವಿಯಿಂದ ಚಾಪ್ಲಿನ್ ನೇತೃತ್ವದಲ್ಲಿ ಭಾರಿ ಸೈನ್ಯವೊಂದು ಕಿತ್ತೂರಿಗೆ ನಾಲ್ಕೂ ದಿಕ್ಕಿನಿಂದ ಮುತ್ತಿಗೆ ಹಾಕಿತು. ಸೊಲ್ಲಾಪುರ, ಬಳ್ಳಾರಿ, ಗುತ್ತಿ, ಪೆಂಗುರ್ಲ, ಮೈಸೂರುಗಳಲ್ಲಿಯೂ ಆಂಗ್ಲ ಸೈನ್ಯವನ್ನು ಸಿದ್ಧವಾಗಿಡಲಾಗಿತ್ತು. ಕಿತ್ತೂರಿನ ತೋಪುಗಳು ತಿಸಮದ್ದುಗಳಾಗಿ ವಿಫಲವಾದವು. ಬ್ರಿಟೀಷರ ಆಧುನಿಕ ಶಸ್ತ್ರ ಹಾಗೂ ಫಿರಂಗಿಗಳ ಮುಂದೆ ದೇಶೀಯ ಆಯುಧಗಳು ತಡೆಯದಾದವು.


**ರಕ್ತದ ಕಾಲ್ವೆ ಹರಿದು ಸತ್ತಹೆಣ ತೇಲಿ ಹೋಗಿ**
**ಸಂಸ್ಥಾನ ಪತನವಾಯಿತು ಒಂದು ದಿವಸಕ್ಕೆ ॥**
**ನಾಲವತ್ತಾರ ವಯಸ್ಸಿನ ಚೆನ್ನಮ್ಮ ರಾಣಿಯವರನ್ನ।**
**ಸ್ಥಾನಬದ್ಧ ಮಾಡಿ ಇಟ್ರು ಬೈಲಹಂಗಲಕ ॥**

ಮಲ್ಲಪ್ಪಶೆಟ್ಟಿ ಮುಂತಾದ ದೇಶದ್ರೋಹಿಗಳ ಕರಾಮತ್ತಿಗೆ ಕಿತ್ತೂರು ಆಹುತಿಯಾಯಿತು.

**ಎಂಥದು ಕಿತ್ತೂರು ಅಂಥಲ್ಲಿ ಹಾಳಾತು**
**ಕೆಂಪುಮೋತಿಯವರು ಬಲಿಹೂಡಿ। ಚೆನ್ನವ್ವನ**
**ಚಿತ್ರದ ಮೂಲ ಅಳದಾರವ್ವ।**

ಎಂಬಂತೆ ಚೆನ್ನಮ್ಮ ಹಾಗೂ ಇನ್ನಿತರ 40 ಸರದಾರರನ್ನು ಬಂಧಿಸಲಾಯಿತು. ಮುಂದೆ ಸಂಗೊಳ್ಳಿ ರಾಯಣ್ಣ ಮುಂತಾದ ಶೂರರು ಎಷ್ಟೇ ಹೋರಾಡಿದರೂ ನಾಡಿಗೆ ಸ್ವಾತಂತ್ರ್ಯ ಬರದಾಯಿತು. ಇದೇ ಚಿಂತೆಯಲ್ಲಿ ಚೆನ್ನಮ್ಮ 1829ರ ಫೆಬ್ರುವರಿ 2 ರಂದು ಬೈಲಹೊಂಗಲದ ಜೈಲಿಯಲ್ಲಿಯೇ ವೀರಮರಣವನ್ನಪ್ಪಿದಳು. ಆದರೆ ಭಾರತದ ಸ್ವಾತಂತ್ರ್ಯೋಂದೋಲನಕ್ಕೆ ಚಿರಸ್ಫೂರ್ತಿಯಾಗಿ ಇತಿಹಾಸದಲ್ಲಿ ಉಳಿದುಕೊಂಡಳು. ಕಿತ್ತೂರಿಗೆ ಭೆಟ್ಟಿ ನೀಡಿದ್ದ ದಿವಂಗತ ಪ್ರಧಾನಿ ಇಂದಿರಾಗಾಂಧಿಯವರು "High among the names of those who fought the establishment of British Rule in India, is that of the brave Karnataka queen Rani Chennamma of Kittur" ಎಂದು ಬರೆದು ರಾಣಿ ಚೆನ್ನಮ್ಮ ಭಾರತೀಯರ ಚಿರಸ್ಮರಣೆಯಲ್ಲುಳಿದು ನಮ್ಮ ಯುವ ಜನಾಂಗಕ್ಕೆ ಯಾವತ್ತೂ ಸ್ಫೂರ್ತಿ ನೀಡುತ್ತಿರುತ್ತಾಳೆಂದು ಬಣ್ಣಿಸಿದ್ದಾರೆ.

ಈಗ ಕಿತ್ತೂರಿನ ಕೋಟೆ ಕ್ಷೀಣಿಸಿದ್ದರೂ ಚೆನ್ನಮ್ಮನ ಹೆಸರಿನಲ್ಲಿ ಬಾಲಕಿಯರಿಗಾಗಿ ಸೈನಿಕ ಶಾಲೆಯ ಮಾದರಿಯಲ್ಲಿ ಒಂದು ಸುಸಜ್ಜಿತ ಭವ್ಯ ವಸತಿ ಶಾಲೆ ನಡೆಯುತ್ತಿದೆ. ಬೆಳಗಾವಿಯ ಸ್ನಾತಕೋತ್ತರ ಕೇಂದ್ರಕ್ಕೆ ಚೆನ್ನಮ್ಮ ರಾಣಿಯ ಹೆಸರಿಡಲಾಗಿದೆ. ಚೆನ್ನಮ್ಮನ ವಿಜಯೋತ್ಸವದ ದಿನವಾದ ಅಕ್ಟೋಬರ್ 23 ನ್ನು ಮಹಿಳಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಇಷ್ಟಾಗಿದ್ದರೂ ರಾಣಿ ಚೆನ್ನಮ್ಮನ ಪುತ್ಥಳಿಯೊಂದನ್ನು ದೇಶದ ರಾಜಧಾನಿ ದೆಹಲಿಯಲ್ಲಿ ಇನ್ನೂ ಪ್ರತಿಷ್ಠಾಪನಗೊಳಿಸಬೇಕಾಗಿದೆ. ಅಲ್ಲಿಯ ಪ್ರಮುಖ ರಸ್ತೆ, ವೃತ್ತಗಳಿಗೆ ಅವಳ ಹೆಸರಿಡುವುದು ಇನ್ನೂ ಬಾಕಿ ಇದೆ. ಕರ್ನಾಟಕದ ಕೀರ್ತಿ ಪತಾಕೆ ರಾಜ್ಯದ ಹೊರಗೂ ಹಾರಬೇಕಿದೆ. ಆದಷ್ಟು ತೀವ್ರ ಇದು ಕೂಡಿ ಬರಲಿ. ರಾಣಿ ಚೆನ್ನಮ್ಮನೇ ಸ್ವಾತಂತ್ರ್ಯ ಸಂಗ್ರಾಮದ ಪ್ರಥಮ ಕಿಡಿಹಾರಿಸಿದ್ದು ಎಂಬುದು ಕರ್ನಾಟಕದ ಹೊರಗಿನವರಿಗೂ ಮನವರಿಕೆಯಾಗಲಿ. ■





# ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯ ಸಾಧನೆಯ ಹಾದಿಯಲ್ಲಿ

**ಕ**ರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ೧೯೬೫ರ ಅನ್ವಯ ರಾಜ್ಯದಲ್ಲಿ ಸಮಗ್ರವಾಗಿ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯನ್ನು ಕಾರ್ಯ ರೂಪಕ್ಕೆ ತರಲಾಗಿದೆ. ರಾಜ್ಯ ಮಟ್ಟದಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ, ಒಂದು ಲಕ್ಷ ಜನ ಸಂಖ್ಯೆಗಿಂತ ಹೆಚ್ಚಿನ ಜನಸಂಖ್ಯೆ ಹೊಂದಿದ ಪ್ರತಿಯೊಂದು ನಗರದಲ್ಲಿ ನಗರ ಕೇಂದ್ರ ಗ್ರಂಥಾಲಯ ಹಾಗೂ ಶಾಖಾ ಗ್ರಂಥಾಲಯಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯಗಳು. ತಾಲ್ಲೂಕು ಕೇಂದ್ರ, ಪುರಸಭೆ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮೀಣ ಗ್ರಂಥಾಲಯಗಳು ಹಾಗೂ ಅಲೆಮಾರಿ ಮತ್ತು ಕೊಳಚೆ ಪ್ರದೇಶ ಗ್ರಂಥಾಲಯಗಳು ಹಾಗೂ ಮಕ್ಕಳಿಗಾಗಿ ಸಮುದಾಯ ಮಕ್ಕಳ ಕೇಂದ್ರ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಪ್ರಸುತ ಸಾರ್ವಜನಿಕ ಗ್ರಂಥಾಲಯ ಇಲಾಖೆಯಡಿಯಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ, ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯ, ೩೦ ಜಿಲ್ಲಾ ಕೇಂದ್ರ ಗ್ರಂಥಾಲಯಗಳು, ೨೬ ನಗರ ಕೇಂದ್ರ ಗ್ರಂಥಾಲಯಗಳು. ೮೨ ವಾಚನಾಲಯಗಳು, ೫೭೬೬ ಗ್ರಾಮ ಪಂಚಾಯತಿ ಗ್ರಂಥಾಲಯಗಳು, ೧೦೦ ಕೊಳಚೆ ಪ್ರದೇಶ ಗ್ರಂಥಾಲಯಗಳು, ೧೨೭ ಅಲೆಮಾರಿ ಗ್ರಂಥಾಲಯಗಳು ಮತ್ತು ೩೧ ಸಮುದಾಯ ಮಕ್ಕಳ ಕೇಂದ್ರ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಕೋವಿಡ್–೧೯ ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿದ್ದು, ಲಾಕ್‌ಡೌನ್ ಮತ್ತು ಸಂಕಷ್ಟದ ದಿನಗಳಲ್ಲಿ ಇಲಾಖೆಯು ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಓದುವ ಸಂಸ್ಕೃತಿಯನ್ನು ಬೆಳೆಸಲು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸಾರ್ವಜನಿಕ ಗ್ರಂಥಾಲಯಗಳನ್ನು ತಂತ್ರಜ್ಞಾನ ಮತ್ತು ಡಿಜಿಟಲ್ ಮೂಲ ಸೌಕರ್ಯದೊಂದಿಗೆ ಆಧುನೀಕರಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಭಾರತ ದೇಶದಲ್ಲಿಯೇ ಪ್ರಪ್ರಥಮವಾಗಿ ಕೈಗೆತ್ತಿಕೊಂಡಿದೆ. ನಮ್ಮ ದೇಶದಲ್ಲಿಯೇ ಮೊಟ್ಟ ಮೊದಲ ಯೋಜನೆ ಇದಾಗಿದ್ದು ಗ್ರಂಥಾಲಯಗಳನ್ನು ಡಿಜಿಟಲೀಕರಣ ಗೊಳಿಸಿ, ದೊಡ್ಡ ಪ್ರಮಾಣದಲ್ಲಿ ಕಲಿಕೆಗೆ ಅವಕಾಶವನ್ನು ಒದಗಿಸಲಾಗಿದೆ. ಇದು ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

ಕರ್ನಾಟಕ ರಾಜ್ಯದಾದ್ಯಂತ ಈ ಯೋಜನೆ ಅಡಿಯಲ್ಲಿ ೨೬ ನಗರ ಕೇಂದ್ರ ಗ್ರಂಥಾಲಯಗಳು ೩೦ ಜಿಲ್ಲಾ ಕೇಂದ್ರ ಗ್ರಂಥಾಲಯಗಳು. ೨೧೬ ತಾಲ್ಲೂಕು ಗ್ರಂಥಾಲಯಗಳು ಸೇರಿ ಒಟ್ಟು ೨೭೨ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪ್ರಥಮ ಹಂತವಾಗಿ ಡಿಜಿಟಲ್ ಗ್ರಂಥಾಲಯ ಸೌಲಭ್ಯವನ್ನು ಒದಗಿಸಲಾಗಿದ್ದು ೧೫–೦೭–೨೦೨೧ರವರೆವಿಗೆ ರಾಜ್ಯಾದ್ಯಂತ ಒಟ್ಟು ೮೩೬೮೮೫೪ ಸದಸ್ಯರು ಡಿಜಿಟಲ್ ಗ್ರಂಥಾಲಯದಲ್ಲಿ ನೋಂದಣಿಯಾಗಿದ್ದು ೧೮೪೨೬೯ ಇ–ಕಂಟೆಂಟ್‌ಗಳನ್ನು ಸಾರ್ವಜನಿಕರು ಉಪಯೋಗಿಸಿದ್ದು ಬಹಳ ಪರಿಣಾಮಕಾರಿಯಾಗಿ ಇದರ ಪ್ರಯೋಜನವನ್ನು ಪಡೆಯುತ್ತಿರುವುದು ಇಲಾಖೆಗೆ ಹೆಮ್ಮೆಯ ವಿಷಯವಾಗಿದೆ.



**ಡಾ. ಸತೀಶ್ ಕುಮಾರ್ ಎಸ್. ಹೊಸಮನಿ**
**ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ**

ಶೈಕ್ಷಣಿಕ ಮತ್ತು ಕಲಿಕೆಗೆ ಅಗತ್ಯವಿರುವ ಎಲ್ಲಾ ವಿಭಾಗಗಳಲ್ಲಿನ ವಿಷಯಗಳಿಗೆ ಸಂಬಂಧಿಸಿದ ಇತ್ತೀಚಿನ ತಂತ್ರಜ್ಞಾನದೊಂದಿಗೆ ಡಿಜಿಟಲ್ ಗ್ರಂಥಾಲಯವನ್ನು ಸ್ಥಾಪಿಸಲಾಗಿದ್ದು ವಿಷಯವಾರು ಇ–ಕಂಟೆಂಟ್‌ಗಳನ್ನು ನೂತನವಾಗಿ ಅಳವಡಿಸಲಾಗಿದೆ. ಈ ಉಪಕ್ರಮವು ಕನ್ನಡ, ಆಂಗ್ಲ, ಹಿಂದಿ, ಉರ್ದು, ಮರಾಠಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಪಾಠಗಳನ್ನು ಒದಗಿಸುತ್ತದೆ. ರಾಜ್ಯ ಮತ್ತು ಸಿಬಿಎಸ್‌ಇ ಮಂಡಳಿಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ಡಿಜಿಟಲ್ ರೂಪದಲ್ಲಿ ಮಾಹಿತಿಯನ್ನು ಸಹ ಒದಗಿಸುತ್ತದೆ.

ಕಲೆ ಮತ್ತು ಮಾನವಿಕತೆ, ವ್ಯಕ್ತಿತ್ವ ಕೌಶಲ್ಯ ಮತ್ತು ಸಾಹಿತ್ಯವನ್ನು ಒಳಗೊಂಡಂತೆ ಶಾಲೆ, ಕಾಲೇಜು ಮುಂತಾದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸುಮಾರು ೫೦೦೦ಕ್ಕೂ ಹೆಚ್ಚು ಕನ್ನಡ ವಿಷಯಗಳಿವೆ. ನಿರ್ದಿಷ್ಟವಾಗಿ ರಾಜ್ಯ ಮತ್ತು ಸಿಬಿಎಸ್‌ಇ ಶಾಲಾ ಮಕ್ಕಳಿಗೆ ಪಠ್ಯಕ್ರಮದ ಪ್ರಕಾರ ಇ–ಪುಸ್ತಕಗಳು ಮತ್ತು ವಿಡಿಯೋಗಳನ್ನು ಒದಗಿಸಲಾಗಿದ್ದು. ೧ ರಿಂದ ೧೨ನೇ ತರಗತಿಯವರೆಗೆ ಸಂಪೂರ್ಣ ವಿಷಯಗಳನ್ನು ಒಳಗೊಂಡಿದೆ. ಕನ್ನಡದಲ್ಲಿ ಸುಮಾರು ೪೨೦೦ಕ್ಕೂ ಹೆಚ್ಚು ಈ–ಪುಸ್ತಕಗಳಿಗೆ ಮತ್ತು ಕನ್ನಡ ಭಾಷೆಯಲ್ಲಿ ಸುಮಾರು ೬೦೦ಕ್ಕೂ ಹೆಚ್ಚು ವೀಡಿಯೋಗಳಿವೆ. ಐಐಟಿ, ಜೆಇಇ, ನೀಟ್ ಇತ್ಯಾದಿಗಳನ್ನು ಒಳಗೊಂಡ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿ ಸಮಾಗ್ರಿಗಳಿವೆ. ಇದು ಹೆಚ್ಚಿನ ವಿಭಾಗದ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ. ಅಲ್ಲದೆ, ವಿದ್ಯಾರ್ಥಿಗಳಿಗೆ ಭೌತಿಕ ಪ್ರಯೋಗಾಲಯದಲ್ಲಿ ನಿರ್ವಹಿಸಲು ಸಾಧ್ಯವಾಗದ ಪ್ರಯೋಗಗಳನ್ನು ಈ ವೇದಿಕೆಯು ಡಿಜಿಟಲ್ ರೂಪದಲ್ಲಿ ಸಮ್ಯುಲೇಶನ್‌ಗಳ ರೂಪದಲ್ಲಿ ಒದಗಿಸುತ್ತದೆ.

ಈ ವೇದಿಕೆಯು ಕನ್ನಡ ಕ್ಲಾಸಿಕ್ಸ್ ಮತ್ತು ಸಾಹಿತ್ಯದ ಸಾಮಗ್ರಿಗಳನ್ನು ಸಹ ಒದಗಿಸುತ್ತದೆ. ಇದು ರಾಜ್ಯದ ಬಹುಪಾಲು ಜನರಿಗೆ ಪ್ರಯೋಜನವನ್ನು ನೀಡುತ್ತದೆ. ಈ ಪ್ಲಾಟ್‌ಫಾರ್ಮ್ ಬಳಕೆದಾರರಿಗೆ ವೆಬ್ ಆಧಾರಿತ ಮತ್ತು ಆಪ್ ಆಧಾರಿತವಾಗಿದೆ. ವೆಬ್‌ನಲ್ಲಿ ಲಭ್ಯವಿರುವ ಎಲ್ಲಾ ಸಾಮಗ್ರಿಗಳು ಆಫ್‌ನಲ್ಲಿಯೂ ಲಭ್ಯವಾಗುತ್ತವೆ ಮತ್ತು ಬಳಕೆದಾರರು ತಮ್ಮ ಮೊಬೈಲ್‌ನಲ್ಲಿ ಆಪ್‌ನ್ನು ಡೌನ್‌ಲೋಡ್ ಮಾಡುವ ಮೂಲಕ ಅದನ್ನು ಬಳಸಬಹುದು. ಯೋಜನೆಯ ಭಾಗವಾಗಿ ರಾಜ್ಯದ ವಿವಿಧ ಜಿಲ್ಲೆಗಳ ೧೦ ಲಕ್ಷ ಸರ್ಕಾರಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಗುಣಮಟ್ಟದ ಕಲಿಕಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.

ಡಿಜಿಟಲ್ ಗ್ರಂಥಾಲಯವನ್ನು ಮೊಬೈಲ್ ಮೂಲಕ ವೀಕ್ಷಿಸಲು e-sarvajanikagranthalaya ಆ್ಯಪ್‌ನ್ನು ಸಾರ್ವಜನಿಕ ಸೇವೆಗೆ ಒದಗಿಸಲಾಗಿದೆ. ವಿವಿಧ ಜಾಲತಾಣಗಳ ಲಿಂಕ್‌ಗಳನ್ನು ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯ ಜಾಲತಾಣದಲ್ಲಿ ಒದಗಿಸಲಾಗಿದೆ.

**ಕರ್ನಾಟಕ ಡಿಜಿಟಲ್ ಸಾರ್ವಜನಿಕ ಗ್ರಂಥಾಲಯದಲ್ಲಿರುವ ವಿವಿಧ ಜಾಲತಾಣಗಳ ಪ್ರಮುಖ ಕೊಂಡಿಗಳು**

**ಕಣಜ :**

ಕಣಜ ಜಾಲತಾಣವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕರ್ನಾಟಕ ಜ್ಞಾನ ಆಯೋಗದ ಸಹ ಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗಿದ್ದು ಇದರಲ್ಲಿ ೮೦೦ ಇ–ಪುಸ್ತಕಗಳನ್ನು ಅಳವಡಿಸಲಾಗಿದೆ.

**ನ್ಯಾಷನಲ್ ಎಮರ್ಜೆನ್ಸಿ ಲೈಬ್ರರಿ ಇ–ಪುಸ್ತಕಗಳು :**

ನೆಟ್‌ವರ್ಕ್ಡ್ ಡಿಜಿಟಲ್ ಲೈಬ್ರರಿ ಆಫ್ ಥೀಸಿಸ್ ಅಂಡ್ ಡಿಸರ್ಟೇಷನ್ (ಎನ್.ಡಿ.ಎಲ್.ಟಿ.ಡಿ.) (ಸಂಶೋಧನ ಪ್ರಬಂಧಗಳನ್ನು ಒದಗಿಸುತ್ತದೆ)

**ತಂತ್ರಜ್ಞಾನ ವರ್ಧಿತ ಕಲಿಕೆಯ ರಾಷ್ಟ್ರೀಯ ಕಾರ್ಯಕ್ರಮ (ಎನ್.ಪಿ.ಟಿ.ಇ.ಎಲ್)**

**ಇ–ಜ್ಞಾನಕೋಶ**

ಡಿಜಿಟಲ್ ಕಲಿಕೆಯ ಸಂಪನ್ಮೂಲಗಳು.

**ಸ್ವಾಮಿ ಆನ್‌ಲೈನ್ ಕೋರ್ಸ್.**

ಸ್ವಾಮಿ ಆನ್‌ಲೈನ್ ಕೋರ್ಸ್ ಪ್ಲಾಟ್‌ಫಾರಂನಲ್ಲಿ ಉತ್ತಮ ಬೋಧನ ಕಲಿಕಾ ಸಂಪನ್ಮೂಲಗಳನ್ನು ಅಳವಡಿಸಲಾಗಿದ್ದು ಈ ಜಾಲತಾಣವನ್ನು ಉಚಿತವಾಗಿ ಪ್ರವೇಶಿಸಬಹುದಾಗಿರುತ್ತದೆ. ಮತ್ತು ಶಾಲಾ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯೋಗವಾದ ಕಲಿಕಾ ಸಂಪನ್ಮೂಲಗಳು ಇದರಲ್ಲಿ ಅಡಕವಾಗಿದೆ.

**ಯು.ಜಿ/ಪಿ.ಜಿ. ಕೋರ್ಸ್‌ಗಳು.**

ಯು.ಜಿ/ಪಿ.ಜಿ. ಕೋರ್ಸ್ ಜಾಲತಾಣವು ಪಿಹೆಚ್.ಡಿ. ತಂತ್ರಜ್ಞಾನೇತರ ಅರ್ಕೈವ್ ಕೋರ್ಸ್‌ಗಳ ಕಲಿಕಾ ಸಾಮಗ್ರಿಗಳನ್ನು ಪ್ರಚಾರಪಡಿಸುತ್ತದೆ.

**ಇ–ಪಿಜಿ ಪಾಠಶಾಲ**

ಸಾಮಾಜಿಕ ವಿಜ್ಞಾನ, ಕಲೆ, ಲಲಿತ ಕಲೆ ಮತ್ತು ಮಾನವಿಕತೆ, ನೈಸರ್ಗಿಕ ಮತ್ತು ಗಣಿತ ವಿಜ್ಞಾನದ ೭೦ ಸ್ನಾತಕೋತ್ತರ ವಿಭಾಗದ ೨೩೦೦೦ ಇ–ಪತ್ರ್ಯ ಹಾಗೂ ವಿಡಿಯೋಗಳನ್ನು ಒಳಗೊಂಡಿದ್ದು ಉತ್ತಮ ಗುಣಮಟ್ಟದ ಪಠ್ಯಕ್ರಮ ಆಧಾರಿತ ಸಂವಾದಾತ್ಮಕ ಪರಿಸರವನ್ನು ಆಯೋಜಿಸುತ್ತದೆ. ಇ–ಕಂಟೆಂಟ್ ಕೋರ್ಸ್‌ವೇರ್ ಇನ್ ಯು.ಜಿ., ಯು.ಜಿ. ವಿಷಯಗಳಿಗೆ ಸಂಬಂಧಿಸಿದಂತೆ ಸುಮಾರು ೨೪೧೧೦ ವಿಷಯಾಧಾರಿತ ಮಾಡ್ಯುಲ್‌ಗಳನ್ನು ಹೊಂದಿದ್ದು ೮೭ ಪದವಿ ಪೂರ್ವ ಕೋರ್ಸ್‌ಗಳ ಇ–ವಿಷಯವನ್ನು ಈ ಜಾಲತಾಣದಲ್ಲಿ ವೀಕ್ಷಿಸಬಹುದಾಗಿದೆ.

**ಸ್ವಯಂಪ್ರಭ**

ಸ್ವಯಂಪ್ರಭ ಕಲೆ, ವಾಣಿಜ್ಯ, ವಿಜ್ಞಾನ, ಪ್ರದರ್ಶನ ಕಲೆಗಳು ಮತ್ತು ಸಾಮಾಜಿಕ ವಿಜ್ಞಾನಗಳು ಮಾನವಿಕ ವಿಜ್ಞಾನ, ಎಂಜಿನಿಯರಿಂಗ್ ತಂತ್ರಜ್ಞಾನ, ಕಾನೂನು. ಔಷಧ, ಕೃಷಿ ಇತ್ಯಾದಿ ವಿಭಾಗಗಳನ್ನು ಒಳಗೊಂಡ ೩೨ ಡಿಜಿಟಲ್ ಚಾನಲ್‌ಗಳ ಒಂದು ಗುಂಪು. ಈ ಜಾಲತಾಣದಲ್ಲಿ ಉತ್ತಮ ಗುಣಮಟ್ಟದ ಶೈಕ್ಷಣಿಕ ಪಠ್ಯಕ್ರಮ ಆಧಾರಿತ ವಿಷಯಗಳನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಮತ್ತು ದೇಶಾದ್ಯಂತದ ನಾಗರೀಕರು ಅಜೀವ ಕಲಿಕೆಯಲ್ಲಿ ಆಸಕ್ತಿಯನ್ನು ಹೊಂದಿದ್ದು ಈ ಡಿಜಿಟಲ್ ಚಾನಲ್‌ಗಳು ಮುಕ್ತವಾಗಿದ್ದು ಯಾವುದೇ ಕೇಬಲ್ ಆಪರೇಟರ್ ಮೂಲಕ ಪ್ರವೇಶಿಸಬಹುದಾಗಿದೆ. ಇದರಲ್ಲಿ ದೇಶ ವಿದೇಶ ಉಪನ್ಯಾಸ ಕಾರ್ಯಕ್ರಮಗಳ ವಿಡಿಯೋಗಳು ಲಭ್ಯವಾಗುತ್ತದೆ.

**ನ್ಯಾಷನಲ್ ಡಿಜಿಟಲ್ ಗ್ರಂಥಾಲಯ**

ನ್ಯಾಷನಲ್ ಡಿಜಿಟಲ್ ಗ್ರಂಥಾಲಯವು ವಿಭಿನ್ನ ಸ್ವರೂಪಗಳಲ್ಲಿನ ಶೈಕ್ಷಣಿಕ ವಿಷಯದ ಡಿಜಿಟಲ್ ಭಂಡಾರವಾಗಿದೆ ಮತ್ತು ಸಂಶೋಧಕರು ಮತ್ತು ಅಜೀವ ಕಲಿಕೆ ಮಾಡುವವರಿಗೆ ಉಪಯೋಗವಾಗುವಂತಹ ಎಲ್ಲಾ ವಿಭಾಗಗಳ ಜನಪ್ರಿಯ ಪ್ರವೇಶ ಸಾಧನಗಳು ಮತ್ತು ವಿಭಿನ್ನ ಸಮರ್ಥ ಕಲಿಕಾ ಸಾಧನಗಳನ್ನು ಎಲ್ಲಾ ಶೈಕ್ಷಣಿಕ ಹಂತದ ಪ್ರಮುಖ ಭಾರತೀಯ ಭಾಷೆಗಳಿಗೆ ಬೆಂಬಲವನ್ನು ಒದಗಿಸುತ್ತದೆ.

**ಶೋಧಗಂಗಾ** : ಈ ಜಾಲತಾಣವು ಸಂಶೋಧನ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಭಾರತೀಯ ಎಲೆಕ್ಟ್ರಾನಿಕ್ಸ್ ಪ್ರಬಂಧಗಳ ಡಿಜಿಟಲ್ ಭಂಡಾರ ವೇದಿಕೆಯಾಗಿದೆ. ಇದರಲ್ಲಿ ೨೬೦೦೦೦ ಎಲೆಕ್ಟ್ರಾನಿಕ್ಸ್ ಪ್ರಬಂಧಗಳು ಲಭ್ಯವಾಗುತ್ತದೆ.

**ಇ–ಶೋಧ ಸಿಂಧ್**

ಇ–ಶೋಧ ಸಿಂಧ್ ಜಾಲತಾಣವು ೧೫೦೦೦ಕ್ಕಿಂತಲೂ ಹೆಚ್ಚು ಮತ್ತು ಪೀರ್ ರಿವ್ಯೂಡದ ಜರ್ನಲ್‌ಗಳಿಗೆ ಆರ್ಕೈವಲ್ ಪ್ರವೇಶವನ್ನು ಒದಗಿಸುತ್ತದೆ. ಮತ್ತು ವಿವಿಧ ವಿಭಾಗಗಳಿಗೆ ಸಂಬಂಧಿಸಿದಂತೆ ಗ್ರಂಥಸೂಚಿ, ವಾಸ್ತವಿಕ ದತ್ತಸಂಚಯಗಳು, ಪ್ರಕಾಶಕರು ಮತ್ತು ಸಂಗ್ರಾಹಕರಿಂದ ಕೇಂದ್ರೀಯ ಅನುದಾನಿತ ತಾಂತ್ರಿಕ ಸಂಸ್ಥೆಗಳು ವಿಶ್ವವಿದ್ಯಾನಿಲಯಗಳಿಗೆ ಮತ್ತು ಅದರ ಸದಸ್ಯ ಸಂಸ್ಥೆಗಳಿಗೆ ಯು.ಜಿ.ಸಿ. ಕಾಯಿದೆ (೮) ಮತ್ತು (೨) ಎಫ್ ವಿಭಾಗಗಳ ವ್ಯಾಪ್ತಿಗೆ ಬರುವ ಕಾಲೇಜುಗಳಿಗೆ ಜರ್ನಲ್ಸ್‌ಗಳನ್ನು ಒದಗಿಸುತ್ತದೆ.

**ವಿದ್ವಾನ್** : ವಿದ್ವಾನ್ ತಜ್ಞರ ದತ್ತ ಸಂಚಯವಾಗಿದ್ದು ಇದು ದೇಶದ ಗೆಳೆಯರು, ನಿರೀಕ್ಷಿತ ಸಹಯೋಗಿಗಳು, ಧನಸಹಾಯ ಏಜೆನ್ಸಿಗಳ ನೀತಿ ತಯಾರಕರು ಮತ್ತು ಸಂಶೋಧನ ವಿದ್ವಾಂಸರಿಗೆ ತಜ್ಞರ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.

**ಆಲ್ ಇಂಡಿಯಾ ರೇಡಿಯೋ**

ಆಲ್ ಇಂಡಿಯಾ ರೇಡಿಯೋ, ಬೆಂಗಳೂರು ಸ್ಟೇಷನ್ ಇಲ್ಲಿ ಸಂಗ್ರಹವಾಗಿರುವ ಇ–ಆಡಿಯೋ ಪುಸ್ತಕ, ಯು–ಟ್ಯೂಬ್ ಲಿಂಕ್‌ಗಳು, ಆಡಿಯೋ ಕ್ಲಿಪಿಂಗ್, ರೂಪಕಗಳು, ಕಥೆ, ನಾಟಕಗಳು, ಉಪನ್ಯಾಸ ಹಾಗೂ ಹಾಡುಗಳನ್ನು ಡಿಜಿಟಲ್ ಜಾಲತಾಣದಲ್ಲಿ ಅಳವಡಿಸಲಾಗಿದೆ.

ಒಟ್ಟು = ೪೧೩೮೯೦ ಇ – ಪುಸ್ತಕ ಮತ್ತು ಜರ್ನಲ್‌ಗಳು ಸಾರ್ವಜನಿಕ ಓದುಗರಿಗೆ ಒದಗಿಸಲಾಗಿದೆ. ಹಾಗೂ ಇ–ದೈನಂದಿನ ಕನ್ನಡ ಪತ್ರಿಕೆಗಳಾದ ಸಂಜೆವಾಣಿ, ಕನ್ನಡಪ್ರಭ, ವಿಜಯ ಕರ್ನಾಟಕ, ವಿಶ್ವವಾಣಿ, ಪ್ರಜಾವಾಣಿ, ಉದಯವಾಣಿ, ಶೋಧವಾಣಿ, ವಾರ್ತಾಪ್ರಭ ಮತ್ತು ಆಂಗ್ಲ Deccan Herald, Times of India, Financial Express, The New Indian Express and Hindi newspaper Hindustan ಗಳ ಲಿಂಕ್‌ಗಳನ್ನು ಕರ್ನಾಟಕ ಡಿಜಿಟಲ್ ಜಾಲತಾಣದಲ್ಲಿ ಅಳವಡಿಸಲಾಗಿದೆ. ಹಾಗೂ ಆಲ್ ಇಂಡಿಯಾ ರೇಡಿಯೋ, ಬೆಂಗಳೂರು ಸ್ಟೇಷನ್ ಇಲ್ಲಿ ಸಂಗ್ರಹವಾಗಿರುವ ಇ–ಆಡಿಯೋ ಪುಸ್ತಕ, ಯು–ಟ್ಯೂಬ್ ಲಿಂಕ್‌ಗಳು, ಆಡಿಯೋ ಕ್ಲಿಪಿಂಗ್ಸ್, ರೂಪಕಗಳು, ಕಥೆ, ನಾಟಕಗಳು, ಉಪನ್ಯಾಸ ಹಾಗೂ ಹಾಡುಗಳನ್ನು ಉಚಿತವಾಗಿ ಪಡೆದು ಕರ್ನಾಟಕ ಡಿಜಿಟಲ್ ಗ್ರಂಥಾಲಯ ಜಾಲತಾಣದಲ್ಲಿ ಅಳವಡಿಸಲಾಗಿದೆ.

**ಜಾಲತಾಣದ ವಿಳಾಸ :**
www.karnatakadigitalpubliclibrary.org

**ಮೊಬೈಲ್ ಆಪ್ ವಿಳಾಸ :** e-sarvajanikagranthalaya

# ಕನ್ನಡ ಸಾಹಿತ್ಯ ಪರಿಷತ್ತಿನ ೨೦೨೦ನೆಯ ಸಾಲಿನ ವಿವಿಧ ದತ್ತಿ ಪ್ರಶಸ್ತಿಗಳಿಗೆ ಆಯ್ಕೆಯಾದ ಕೃತಿಗಳು ಹಾಗೂ ಆ ಕೃತಿಗಳ ಲೇಖಕರು

**೧. ಬಿಸಲೇರಿ ಜಯಣ್ಣ ಮತ್ತು ಬಿಸಲೇರಿ ಬ್ರದರ್ಸ್ ದತ್ತಿ : ನಗದು ಪ್ರಶಸ್ತಿ ರೂ. ೧೦,೦೦೦/–**
ಬಹುಮಾನಿತ ಕೃತಿ : ಆರೋಗ್ಯ ಎಂದರೇನು?
ಲೇಖಕರು : ಡಾ. ಎಸ್.ಪಿ. ಯೋಗಣ್ಣ

**೨. ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಮತ್ತು ಮಕ್ಕಳ ಸಾಹಿತ್ಯ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೧೦,೦೦೦/–**
ಬಹುಮಾನಿತ ಕೃತಿ : ದೇವರ ದಾಸಿಮಯ್ಯ–ಮರುಚಿಂತನೆ
ಲೇಖಕರು : ಡಾ. ವಾಸುದೇವ ಬಡಿಗೇರ

**೩. ಶ್ರೀಮತಿ ಭಾರತಿ ಮೋಹನ ಕೋಟ ದತ್ತಿ 'ಅನುವಾದ ಸಾಹಿತ್ಯಕ್ಕಾಗಿ' : ನಗದು ಪ್ರಶಸ್ತಿ ರೂ. ೧೦,೦೦೦/–**
ಬಹುಮಾನಿತ ಕೃತಿ : ಕೆಂಪು ಮುಡಿಯ ಹೆಣ್ಣು
ಲೇಖಕರು : ಶ್ರೀ ಓ.ಎಲ್. ನಾಗಭೂಷಣಸ್ವಾಮಿ

**೪. ಹೊಳಲ್ಕೆರೆ ಪದ್ಮಾವತಮ್ಮ ಶ್ರೀಪಾಲಶೆಟ್ಟಿ ಡಾ. ಮದನಕೇಸರಿ ಜೈನ ದತ್ತಿ : ನಗದು ಪ್ರಶಸ್ತಿ ರೂ. ೭,೫೦೦/–**
ಬಹುಮಾನಿತ ಕೃತಿ : ದಶರತ್ನಗಳು
ಲೇಖಕರು : ಶ್ರೀ ಎಸ್.ಬಿ. ಮುನ್ನೊಳ್ಳಿ

**೫. ಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ದತ್ತಿ : ನಗದು ಪ್ರಶಸ್ತಿ ರೂ. ೬,೦೦೦/–**
ಬಹುಮಾನಿತ ಕೃತಿ : ವಿದೇಶಗಳಲ್ಲಿ ಜೈನ ಧರ್ಮ
ಲೇಖಕರು : ಪ್ರೊ. ಜೀವಂಧರಕುಮಾರ್ ಹೋತಪೇಟಿ

**೬. ವಸುದೇವ ಭೂಪಾಲಂ ದತ್ತಿ :**
ಕಾದಂಬರಿ : ನಗದು ಪ್ರಶಸ್ತಿ ರೂ. ೫,೦೦೦/–
ಬಹುಮಾನಿತ ಕೃತಿ : ದಂದುಗ
ಲೇಖಕರು : ಶ್ರೀ ಅಮರೇಶ ನುಗಡೋಣಿ
ಸಣ್ಣಕತೆ : ನಗದು ಪ್ರಶಸ್ತಿ ರೂ. ೩,೦೦೦/–
ಬಹುಮಾನಿತ ಕೃತಿ : ಶಿಸ್ತು ಮತ್ತು ಇತರ ಕಥೆಗಳು
ಲೇಖಕರು : ಶ್ರೀ ಶರತ್ ಕಲ್ಕೋಡ್
ಮಕ್ಕಳ ಸಾಹಿತ್ಯ ಕೃತಿ : ನಗದು ಪ್ರಶಸ್ತಿ ರೂ. ೨,೦೦೦/–
ಬಹುಮಾನಿತ ಕೃತಿ : ಅಮ್ಮ ಮತ್ತು ಮೋಡ
ಲೇಖಕರು : ಜೀನಹಳ್ಳಿ ಸಿದ್ಧಲಿಂಗಪ್ಪ
ವೈಚಾರಿಕ ಕೃತಿ : ನಗದು ಪ್ರಶಸ್ತಿ ರೂ. ೨,೦೦೦/–
ಬಹುಮಾನಿತ ಕೃತಿ : ಬಂಡಾಯ ಸಾಹಿತ್ಯದ ವಿಭಿನ್ನ ನೆಲೆಗಳು
ಲೇಖಕರು : ಡಾ. ಅಶೋಕ ನರೋಡೆ

**೭. ಡಿ. ಮಾಣಿಕರಾವ ಸ್ಮರಣಾರ್ಥ ಹಾಸ್ಯ ಸಾಹಿತ್ಯ ದತ್ತಿ : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ನಿದ್ರಾಂಗನೆಯ ಸೆಳವಿನಲ್ಲಿ
ಲೇಖಕರು : ಶ್ರೀ ಎನ್. ರಾಮನಾಥ್

**೮. ದಿ|| ಡಾ. ಎ.ಎಸ್. ಧರಣೇಂದ್ರಯ್ಯ–ಮನೋವಿಜ್ಞಾನ ದತ್ತಿ : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ಮುಟ್ಟು
ಲೇಖಕರು : ಡಾ. ಎಚ್.ಎಸ್. ಅನುಪಮ

**೯. ಭಾರತೀಸುತ ಸ್ಮಾರಕ ದತ್ತಿ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ಮಂಜೀ ಮಹದೇವನ ಗಂಜೀ ಪುರಾಣ
ಲೇಖಕರು : ಶ್ರೀ ಜಿ.ಎಸ್. ಭಟ್ಟ ಸಾಗರ

**೧೦. ಶ್ರೀಮತಿ ಲಕ್ಷ್ಮೀದೇವಿ ಶಾಂತರಸ ಹೆಂಬೇರಾಳು ದತ್ತಿ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ಮನಸು ಅಭಿಸಾರಿಕೆ
ಲೇಖಕರು : ಶ್ರೀಮತಿ ಶಾಂತಿ ಕೆ. ಅಪ್ಪಣ್ಣ

**೧೧. ಪ್ರಕಾಶಕ ಆರ್.ಎನ್. ಹಬ್ಬು ದತ್ತಿ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ಕೂರ್ಗ್ ರೆಜಿಮೆಂಟ್
ಪ್ರಕಾಶಕರು : ಮೈತ್ರಿ ಪ್ರಕಾಶನ, ಬೆಂಗಳೂರು

**೧೨. ಅಮೃತ ಮಹೋತ್ಸವ ಸಾ.ಸಮ್ಮೇಳನದ ಸವಿ ನೆನಪಿನ ದತ್ತಿ (ಎಲ್.ಬಸವರಾಜು ದತ್ತಿ) : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ಸುಬೇದಾರ ರಾಮಜಿ ಸಕ್ಪಾಲ್
ಲೇಖಕರು : ಪ್ರಭುಲಿಂಗ ನೀಲೂರೆ

**೧೩. ನಿಡಸಾಲೆ ಪುಟ್ಟಸ್ವಾಮಯ್ಯ ಸಾಹಿತ್ಯ ಪ್ರಶಸ್ತಿ ದತ್ತಿ : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ಸಂಕ್ಷಿಪ್ತ ಪಾಲಿ–ಕನ್ನಡ ನಿಘಂಟು
ಲೇಖಕರು : ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್

**೧೪ ಗುಬ್ಬಿ ಸೋಲೂರು ಮುರುಗಾರಾಧ್ಯ ದತ್ತಿ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ಬೂಬರಾಜ ಸಾಮ್ರಾಜ್ಯ
ಲೇಖಕರು : ಶ್ರೀ ಬಿ. ಜನಾರ್ದನ ಭಟ್

**೧೫ ಶ್ರೀಮತಿ ಗೌರುಭಟ್ ದತ್ತಿ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ಒಂಟಿ ಹಕ್ಕಿಯ ಪಯಣ
ಲೇಖಕರು : ಶ್ರೀಮತಿ ವಿನುತಾ ಹಂಚಿನಮನಿ

**೧೬. ಶ್ರೀಮತಿ ಗಂಗಮ್ಮ ಶ್ರೀ ಬಿ. ಶಿವಣ್ಣ ದತ್ತಿ : ನಗದು ಪ್ರಶಸ್ತಿ ರೂ. ೫,೦೦೦/–**
ಬಹುಮಾನಿತ ಕೃತಿ : ಕುವೆಂಪು ಅಲಕ್ಷಿತರೆದೆಯ ದೀಪ
ಲೇಖಕರು : ಡಾ. ಎಚ್.ಎಸ್. ಸತ್ಯನಾರಾಯಣ

**೧೭. ಸಾರಂಗಿ ವೆಂಕಟರಾಮಯ್ಯ ಶ್ರೀನಿವಾಸರಾವ್ ದತ್ತಿ : ನಗದು ಪ್ರಶಸ್ತಿ ರೂ. ೨,೦೦೦/–**
ಬಹುಮಾನ ಕೃತಿ : ಚಮತ್ಕಾರಿ ಚಾಕ್ಲೇಟು
ಲೇಖಕರು : ಶ್ರೀ ಸೋಮು ಕುದರಿಹಾಳ

**೧೮. ಪಳಕಳ ಸೀತಾರಾಮಭಟ್ಟ ದತ್ತಿ : ನಗದು ಪ್ರಶಸ್ತಿ ರೂ. ರೂ. ೨,೦೦೦/–**
ಬಹುಮಾನಿತ ಕೃತಿ : ಗೊಂಬೆಗೊಂದು ಚೀಲ
ಲೇಖಕರು : ಶ್ರೀ ವಿಶಾಲ ಆರಾಧ್ಯ

**೧೯. ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ಬಾಪು ರಾಮಣ್ಣ ದತ್ತಿ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೨,೦೦೦/–**
ಬಹುಮಾನಿತ ಕೃತಿ : ಒಲವೆಂಬ ಸುಂದರ ಒಗಟು
ಲೇಖಕರು : ಶ್ರೀಮತಿ ಗಿರಿಜಾರಾಜ್

**೨೦. ದಿ|| ಗೌರಮ್ಮ ಹಾರ್ನಹಳ್ಳಿ ಕೆ. ಮಂಜಪ್ಪ ದತ್ತಿ : ನಗದು ಪ್ರಶಸ್ತಿ ರೂ. ೧,೦೦೦/–**
ಬಹುಮಾನಿತ ಕೃತಿ : ಕರೋನ ಮುಕ್ಕೆಯ ಕಥನ
ಲೇಖಕರು : ಡಾ. ಕೆ.ಆರ್. ಸಂಧ್ಯಾರೆಡ್ಡಿ

**೨೧. ಶ್ರೀಮತಿ ಜಯಲಕ್ಷ್ಮಮ್ಮ ಬಿ.ಎಸ್. ಸಣ್ಣಯ್ಯ ದತ್ತಿ : ನಗದು ಪ್ರಶಸ್ತಿ ರೂ. ೧,೦೦೦/–**
ಬಹುಮಾನಿತ ಕೃತಿ : ಲಿಂಗಣ್ಣ ಕವಿಯ ವರರಮ್ಯ ರತ್ನಾಕರ
ಲೇಖಕರು : ಸಂ. ಡಾ. ಕೆ. ರವೀಂದ್ರನಾಥ

**೨೨. ಜಿ.ಆರ್. ರೇವಯ್ಯ ದತ್ತಿ : ನಗದು ಪ್ರಶಸ್ತಿ ರೂ. ೧,೦೦೦/–**
ಬಹುಮಾನಿತ ಕೃತಿ : ಸಾವಿತ್ರಿಬಾಯಿ ಫುಲೆ
ಲೇಖಕರು : ಡಾ. ಜಿ.ಸಿ. ನಿಂಗಣ್ಣ

**೨೩. ಡಾ|| ಆರ್.ಜೆ. ಗಲಗಲಿ ದತ್ತಿ : ನಗದು ಪ್ರಶಸ್ತಿ ರೂ. ೧,೦೦೦/–**
ಬಹುಮಾನಿತ ಕೃತಿ : ಆರ್ತ
ಲೇಖಕರು : ಶ್ರೀ ಸಂತೋಷ ನಾಯಿಕ

**೨೪. ದಿ|| ಕಾಕೋಳು ಸರೋಜಮ್ಮ ದತ್ತಿ : ನಗದು ಪ್ರಶಸ್ತಿ ರೂ. ೧,೦೦೦/–**
ಬಹುಮಾನಿತ ಕೃತಿ : ಗೋದಾನ
ಲೇಖಕರು : ಶ್ರೀ ಶ್ರೀಕಾಂತ ಕಕ್ಕೇರಿ

**೨೫. ನಾ.ಕು. ಗಣೇಶ್ ದತ್ತಿ : ನಗದು ಪ್ರಶಸ್ತಿ ರೂ. ೧,೦೦೦/–**
ಬಹುಮಾನಿತ ಕೃತಿ : ಗಾಯಗೊಂಡವರಿಗೆ
ಲೇಖಕರು : ಶ್ರೀಮತಿ ಮಂಜುಳಾ ಹಿರೇಮಠ

**೨೬. ಶ್ರೀಮತಿ ಸುಮನ್ ಸೋಮಶೇಖರ್ ಸೋಮವಾರಪೇಟೆ ದತ್ತಿ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೧,೦೦೦/–**
ಬಹುಮಾನಿತ ಕೃತಿ : ಬೋಳುಮರ ಹಕ್ಕಿ ಮತ್ತು ನಾನು
ಲೇಖಕರು : ಶ್ರೀ ವಿ.ಎಸ್. ಶಾನ್‌ಭಾಗ್

**೨೭. ಶ್ರೀ ಜಿ.ಎನ್. ಹೇಮರಾಜ್ ಕುಶಾಲನಗರ ದತ್ತಿ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೧,೦೦೦/–**
ಬಹುಮಾನಿತ ಕೃತಿ : ಹರಾಂನ ಕಥೆಗಳು
ಲೇಖಕರು : ಶ್ರೀ ಮುಸ್ತಾಫ ಕೆ.ಎಚ್.

**೨೮. ಮಲ್ಲಿಕಾ ದತ್ತಿ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಮುದ್ದು ಮಗಳೇ ಮತ್ತೊಮ್ಮೆ ಹುಟ್ಟಿ ಬಾ
ಲೇಖಕರು : ಶ್ರೀಮತಿ ಲತಾಶ್ರೀನಿವಾಸ್

**೨೯. ಅಂತರರಾಷ್ಟ್ರೀಯ ಮಹಿಳಾ ವರ್ಷದ ಪ್ರಶಸ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಮೈ ಮುಚ್ಚಲೊಂದು ತುಂಡು ಬಟ್ಟೆ
ಲೇಖಕರು : ಶ್ರೀಮತಿ ಶ್ರೀದೇವಿ ಕೆರೆಮನೆ

**೩೦. ಶ್ರೀಮತಿ ಶಾರದಾ ರಾಮಲಿಂಗಪ್ಪ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ನುಡಿಯ ನೆರಳು
ಲೇಖಕರು : ಶ್ರೀಮತಿ ಮಂಜುಳಾ ಗೋನಾಳ

**೩೧. ಲಿಂ. ಲೀಲಾದೇವಿ ಗುರುಸಿದ್ದಪ್ಪ ಸಿಂಧೂರ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಸ್ತ್ರೀ ಸಮಾನತೆಯ ಸಂಧಿಕಾಲದಲ್ಲಿ
ಲೇಖಕರು : ಶ್ರೀಮತಿ ನಾಗರೇಖಾ ಗಾಂವಕರ

**೩೨. ಶ್ರೀಮತಿ ನೀಲಗಂಗಾ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ದೂರ ದೇಶವೆಂಬ ಪಕ್ಕದ ಮನೆ
ಲೇಖಕರು : ಶ್ರೀಮತಿ ಕಾವ್ಯಕಡಮೆ ನಾಗರಕಟ್ಟೆ

**೩೩. ಶ್ರೀಮತಿ ಕೆ.ಎಸ್. ಭಾರತಿ ರಾಜಾರಾಮ್ ಮಧ್ಯಸ್ಥ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಆಮ್ರಪಾಲಿ
ಲೇಖಕರು : ಶ್ರೀಮತಿ ಗಾಯತ್ರಿ ರಾಜ್

**೩೪. ಶ್ರೀಮತಿ ಶಾರದಾ ಆರ್. ರಾವ್ ದತ್ತಿ : ನಗದು ಪ್ರಶಸ್ತಿ ರೂ. ೨೫೦/–**
ಬಹುಮಾನಿತ ಕೃತಿ : ಕಥಾ ವ್ಯವಕಲನ
ಲೇಖಕರು : ಶ್ರೀಮತಿ ರೇಶ್ಮಾ ಭಟ್

**೩೫. ದಿ|| ಎಚ್. ಕರಿಯಣ್ಣ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಹೊಸ ಚಿಗುರು ಹಳೆ ಬೇರು
ಲೇಖಕರು : ಶ್ರೀಮತಿ ಶಕುಂತಲಾ ಪಿ. ಹಿರೇಮಠ

**೩೬. ದಿ|| ಡಾ. ಎಚ್. ನರಸಿಂಹಯ್ಯ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಮನಸ್ಸಿಗೂ ಸೋಂಕು
ಲೇಖಕರು : ಡಾ. ಕೆ.ಎಸ್. ಪವಿತ್ರ

**೩೭. ದಿ|| ಶ್ರೀಮತಿ ಕೆ.ವಿ.ರತ್ನಮ್ಮ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಕರುಳ ಬಳ್ಳಿ ಮತ್ತು ಜೀವಕಾರುಣ್ಯ
ಲೇಖಕರು : ಶ್ರೀ ಶಿವಶಂಕರ ಸೀಗೇಹಟ್ಟಿ

**೩೮. ರತ್ನಾಕರವರ್ಣಿ ಮುದ್ದಣ ಅನಾಮಿಕ ದತ್ತಿ (ಪದ್ಯ ಕೃತಿ) : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಸರಹದ್ದುಗಳಿಲ್ಲದ ಭೂಮಿಯ ಕನಸು
ಲೇಖಕರು : ಶ್ರೀಮತಿ ನಿರ್ಮಲಾ ಶೆಟ್ಟರ

**ರತ್ನಾಕರವರ್ಣಿ ಮುದ್ದಣ ಅನಾಮಿಕ ದತ್ತಿ (ಗದ್ಯ ಕೃತಿ) :ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಪದ ಸೋಪಾನ
ಲೇಖಕರು : ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ

**೩೯. ಪಿ. ಶಾಂತಿಲಾಲ್ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನ ಕೃತಿ : ದಶರತ್ನಗಳು
ಲೇಖಕರು : ಶ್ರೀ ಎಸ್.ಬಿ. ಮುನ್ನೊಳ್ಳಿ

**೪೦. ಅಕ್ಕಮ್ಮ ಗಿರಿಗೌಡ ರುದ್ರಪ್ಪ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಜಾನಪದ ಬಾಗಿನ
ಲೇಖಕರು : ಡಾ. ಶ್ರೀಶೈಲ ನಾಗರಾಳ

**೪೧. ಕುಂಬಾಸ ಪ್ರಶಸ್ತಿ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಇದು ಗುಳಿಗೆ ಲೋಕವಯ್ಯ
ಲೇಖಕರು : ಡಾ. ಬಸವರಾಜ ಕುಂಬಾರ

**೪೨. ಪ್ರೊ. ಡಿ.ಸಿ. ಅನಂತಸ್ವಾಮಿ ಸಂಸ್ಮರಣ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಜೀರೋ ಬ್ಯಾಲೆನ್ಸ್
ಲೇಖಕರು : ಡಾ. ಶ್ರುತಿ ಬಿ.ಆರ್.

**೪೩. 'ಸಿಸು' ಸಂಗಮೇಶ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಅವನೆಲ್ಲಿರುವನು ಹೇಳಮ್ಮ
ಲೇಖಕರು : ಶ್ರೀ ಜಂಬುನಾಥ ಕಂಚ್ಯಾಣಿ

**೪೪. ಶ್ರೀಮತಿ ಪಂಪಮ್ಮ–ಶರಣೇಗೌಡ ವಿರುಪಾಪುರ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಶಾಸನ ಸಂಸ್ಕೃತಿ
ಲೇಖಕರು : ಡಾ. ಶರಣಪ್ಪ ಆನೆ ಹೊಸೂರು

**೪೫. ಕೆ. ವಾಸುದೇವಾಚಾರ್ ದತ್ತಿ : ನಗದು ಪ್ರಶಸ್ತಿ ರೂ. ೫೦೦/–**
ಬಹುಮಾನಿತ ಕೃತಿ : ಕೋಳಿ ಅಂಕ
ಲೇಖಕರು : ಡಾ. ಕುರುವ ಬಸವರಾಜ್

**೪೬.. ಅಸುಂಡಿ ಹುದ್ದಾರ್ ಕೃಷ್ಣರಾವ್ ಸ್ಮಾರಕ ದತ್ತಿ : ನಗದು ಪ್ರಶಸ್ತಿ ರೂ. ೨೫೦/–**
ಬಹುಮಾನಿತ ಕೃತಿ : ಸಾರ್ಥಕ–ಸಾಧನೆ
ಲೇಖಕರು : ಡಾ. ಆರ್. ವಾದಿರಾಜು

**೪೭. ಜಿ.ಪಿ.ರಾಜರತ್ನಂ ಸಂಸ್ಮರಣ ದತ್ತಿ : ನಗದು ಪ್ರಶಸ್ತಿ ರೂ. ೨೫೦/–**
ಬಹುಮಾನಿತ ಕೃತಿ : ಮುದ್ದುಗುಮ್ಮ
ಲೇಖಕರು : ಶ್ರೀ ದೀಪಿತ್ ಎಸ್.ಕೆ. ಪೆರಾಡಿ

**೪೮. ಪ್ರೊ. ದೇವಪ್ರಕಾಶ್ ಹಾಸ್ಯ/ವ್ಯಂಗ್ಯಚಿತ್ರ ಸಾಹಿತ್ಯ ಪ್ರಶಸ್ತಿ ದತ್ತಿ : ರೂ. ೨,೦೦೦/–**
ಬಹುಮಾನಿತ ಕೃತಿ : ವಠಾರಮೀಮಾಂಸೆ
ಲೇಖಕರು : ಶ್ರೀಮತಿ ಆರತಿ ಘಟಿಕಾರ್




**ದೇಶದ ಸ್ವಾತಂತ್ರ್ಯದ ಅಮೃತಮಹೋತ್ಸವದ ನಿಮಿತ್ತ ೧೫-೮-೨೦೨೧ರಂದು ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಕ.ಸಾ.ಪ. ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್ ಅವರೊಂದಿಗೆ ಕ.ಸಾ.ಪ. ಸಿಬ್ಬಂದಿಗಳು ಹಾಜರಿದ್ದರು**

# 'ಕುವೆಂಪು ಸಾಹಿತ್ಯ ಮತ್ತು ಸಮಕಾಲೀನತೆ' ಕುರಿತು ರಾಷ್ಟ್ರಮಟ್ಟದ ಕಮ್ಮಟ

ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಕುಪ್ಪಳಿಯ ಕುವೆಂಪು ಅಧ್ಯಯನ ಕೇಂದ್ರ ಹಾಗೂ ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಇವುಗಳ ಸಂಯುಕ್ತ ಆಶ್ರಯದಲ್ಲಿ ೨೦೨೧ರ ಜನವರಿ ೨೦ ಮತ್ತು ೨೧ರಂದು ಕುಪ್ಪಳಿಯಲ್ಲಿ 'ಕುವೆಂಪು ಸಾಹಿತ್ಯ ಮತ್ತು ಸಮಕಾಲೀನತೆ' ವಿಷಯ ಕುರಿತು ರಾಷ್ಟ್ರಮಟ್ಟದ ಕಮ್ಮಟ ನಡೆಸಿತು.

ಇದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ಅವರು ಉದ್ಘಾಟಿಸಿ ಕುವೆಂಪು ಎಂಬುದು ಒಂದು ಚುಂಬಕ ಶಕ್ತಿ. ಅಖಂಡ ಕರ್ನಾಟಕವನ್ನು ತಮ್ಮ ಬರೆಹ ಮತ್ತು ಚಿಂತನೆಗಳಿಂದ ಪ್ರಭಾವಿಸಿದ ಚೇತನ. ಅವರು ತಮ್ಮ ಸಾಹಿತ್ಯದಲ್ಲಿ ಮಾನವ ಸಂಬಂಧಗಳು, ನಿಸರ್ಗ ಪ್ರೀತಿ ಹಾಗೂ ಕನ್ನಡಪರ ಕಾಳಜಿಯನ್ನು ವ್ಯಕ್ತಮಾಡಿದ್ದಾರೆ. ಪರಿಸರ ಮತ್ತು ಕನ್ನಡದ ಸಮಸ್ಯೆಗಳು ಮೊದಲಿಗಿಂತ ಜಟಿಲವಾಗಿವೆ. ಹಾಗಾಗಿ ಅವರ ಸಾಹಿತ್ಯಕ್ಕೆ ಸಮಕಾಲೀನತೆ ತನಗೆ ತಾನೇ ಒದಗಿ ಬಂದಿದೆ. ಅವರ ಸಾಹಿತ್ಯಕ್ಕೆ ಸಮಸ್ಯೆಯ ಈ ಸಿಕ್ಕುಗಳನ್ನು ಬಿಡಿಸುವ, ಪರಿಹಾರವನ್ನು ಸೂಚಿಸುವ ಉದ್ದೇಶವಿದೆ ಎಂದರು.

ಮುಂದುವರೆದು ಮಾತನಾಡಿದ ಅವರು ಕುವೆಂಪು ಮತ್ತು ಸಮಕಾಲೀನತೆ; ಇವೆರಡೂ ಸಮಾನಾಂತರವಾಗಿ ಸಾಗುವ ಹಳಿಗಳಲ್ಲ. ಒಂದರಲ್ಲಿ ಮತ್ತೊಂದು ಅಡಕಗೊಂಡಿರುವಂತಹವು. ಸಾಹಿತ್ಯ ಸಮಕಾಲೀನವಾಗಿದೆ ಎಂದರೆ ಆಗಿನ ಕಾಲದ ಸಮಸ್ಯೆ, ಸಂಕಟ, ಯಾತನೆ ಈಗಲೂ ಇವೆ ಎಂದರ್ಥ. ಹಾಗಾಗಿ ಕುವೆಂಪು ಅವರ ರಚನೆಗಳ ಆಶಯದಂತೆ ಸಮಾಜದ ಓರೆಕೋರೆಗಳು ಎಂಬ ಕರಡನ್ನು ತಿದ್ದಿ–ತೀಡಿ ಅದನ್ನು ಚೆಲುವಾಗಿಸಿ, ಚೆಂದವಾಗಿಸಬೇಕಿದೆ. ಯಾವುದೇ ಸಾಹಿತ್ಯದಲ್ಲಿನ ಜೀವಪರ ಅಂಶಗಳು ಸಮಕಾಲೀನವಾಗಿರಬೇಕು. ಆ ಕಾಲದ ಸಮಸ್ಯೆ, ಸಂಕಟ, ಯಾತನೆಗಳು ಈಗ ನಿವಾರಣೆಯಾಗಿವೆ ಎನ್ನುವಂತಿರಬೇಕು. ಆಗ ಮಾತ್ರ ಸಾಹಿತ್ಯ ರಚನೆಯ ಉದ್ದೇಶ ಸಾರ್ಥಕವಾಗುತ್ತದೆ ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕುವೆಂಪು ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಬಿ.ಎಂ. ಪುಟ್ಟಯ್ಯ ಕುವೆಂಪು ಅವರ



ಸಾಹಿತ್ಯವು ಶಾಂತಿ ಮತ್ತು ಸೌಹಾರ್ದತೆಗಳಿಂದ ಬದುಕಬೇಕಾದ ಮಾರ್ಗವನ್ನು ತೋರಿಸಿದೆ ಎಂದರು.

ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ತಮ್ಮ ಆಶಯ ಭಾಷಣದಲ್ಲಿ ಕುವೆಂಪು ಅವರು ಭಾರತೀಯ ಪರಂಪರೆಯ ವೇದ ಮತ್ತು ಉಪನಿಷತ್ತುಗಳನ್ನು ಜೀರ್ಣಿಸಿಕೊಂಡಿದ್ದರು ಎಂದರು.

ಅಧ್ಯಕ್ಷತೆ ವಹಿಸಿದ್ದ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಸ.ಚಿ. ರಮೇಶ ಕುವೆಂಪು ಅವರದು ಜಾಗತಿಕ ಸಾಹಿತ್ಯ ಮತ್ತು ಎಲ್ಲ ಕಾಲಕ್ಕೂ ಸಲ್ಲುವ ಸಮಕಾಲೀನ ಸಾಹಿತ್ಯ ಎಂದರು.

ಕುವೆಂಪು ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ಅವರು ಮುಖ್ಯ ಅತಿಥಿಗಳಾಗಿದ್ದರು. ಶಿಬಿರದಲ್ಲಿ ೨೫ ಜನ ಲೇಖಕರು ಮತ್ತು ೨೫ ಜನ ಲೇಖಕಿಯರು ಭಾಗವಹಿಸಿದ್ದರು. ಎರಡನೆಯ ದಿನದ ಸಂಜೆ ಕನ್ನಡ ವಿಶ್ವವಿದ್ಯಾಲಯದ ಡಾ. ಎಚ್.ಎಸ್. ರಘುನಾಥ್ ಸಮಾರೋಪ ಭಾಷಣ ಮಾಡಿ ಕಮ್ಮಟಿಗರಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು. ■

# ಕನ್ನಡ ಕಾಯಕ.. ಅಭಿಮಾನ ಪ್ರೇರಕ...

>> ೬ನೇ ಪುಟದಿಂದ...

ವರ್ಷದ ಕಾಲ 'ಕನ್ನಡ ಕಾಯಕ ವರ್ಷ' ಘೋಷಿಸಿರುವುದು ಸರಿ. ಆದರೆ ಆಡಳಿತದಲ್ಲಿ ಅದು ಎಷ್ಟು ಅನುಷ್ಠಾನ ಆಗುತ್ತಿದೆ ಎಂದು ನಿಗಾ ಇಡುವವರು ಯಾರು..? ಕನ್ನಡ ಭಾಷೆಗೆ ಅದರದ್ದೇ ಆದ ಸೌಂದರ್ಯ ಹಾಗೂ ಸತ್ವವಿದೆ. ಅದನ್ನು ಕಾಪಾಡುವ ಹೊಣೆ ಸರ್ಕಾರಗಳ ಮೇಲಿದೆ. ೨೦೨೧ರ ಅಕ್ಟೋಬರ್ ೩೧ರ ವರೆಗಿನ ಅವಧಿಯನ್ನು ಕನ್ನಡ ಕಾಯಕ ವರ್ಷವನ್ನಾಗಿ ಆಚರಿಸುವ ಸರ್ಕಾರ ಆನಂತರ ಆಡಳಿತದ ಎಲ್ಲ ಹಂತದಲ್ಲೂ ಕನ್ನಡ ಭಾಷೆಯ ಬಳಕೆ ಕಡ್ಡಾಯ ನಿಯಮವನ್ನು ಮುಂದುವರೆಸಬೇಕು.

ಸರ್ಕಾರಿ ಇಲಾಖೆ ಮತ್ತು ಕೋರ್ಟ್ ಆದೇಶಗಳೂ ಕನ್ನಡದಲ್ಲಿ ಮುದ್ರಣ ಆಗಬೇಕು. ಆಗ ಮಾತ್ರ ಪ್ರತಿಯೊಬ್ಬ ಪ್ರಜೆಗೂ ಆಡಳಿತದ ಪ್ರತಿ ವಿಚಾರ ಅರಿವಿಗೆ ಬರುತ್ತದೆ.

ಕನ್ನಡ ರಾಜ್ಯೋತ್ಸವ ಮತ್ತು ಕೆಲವು ಸಂದರ್ಭಗಳಲ್ಲಿ ಮಾತ್ರ ಕನ್ನಡವನ್ನು ಸರ್ಕಾರ ಮತ್ತು ಗಣ್ಯರು ನೆನಪಿಸಿಕೊಳ್ಳುವ ಸಂಸ್ಕೃತಿಯು ಇಂದಿನದೇನಲ್ಲ. ಕನ್ನಡ ಕಾಯಕ ಎನ್ನುವುದು ಇವತ್ತಿಗೂ, ಯಾವತ್ತಿಗೂ ಪ್ರತಿಯೊಬ್ಬರ ಸಂಕಲ್ಪ ಆಗಬೇಕು. ಗಡಿ ಭಾಗಗಳಲ್ಲಿ, ರಾಜ್ಯ ರಾಜಧಾನಿಯಲ್ಲಿ ಕನ್ನಡವನ್ನು ಸುಧಾರಿಸುವ ಪ್ರಯತ್ನಕ್ಕೆ ಸರ್ಕಾರ ಇನ್ನಷ್ಟು ಪ್ರಾಮುಖ್ಯತೆಯನ್ನು ನೀಡಬೇಕು. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಡಿಯಲ್ಲಿ ಬರುವ ಎಲ್ಲಾ ಅಕಾಡೆಮಿಗಳು ಸೇರಿದಂತೆ ಕನ್ನಡ ಸಾಂಸ್ಥಿಕ ಕೇಂದ್ರಗಳು ಅನುದಾನ ಕೊರತೆ, ಪ್ರೋತ್ಸಾಹ ಕೊರತೆಯನ್ನು ಯಾವತ್ತೂ ಎದುರಿಸಬಾರದು. ಈವರೆಗೆ ಸರ್ಕಾರಗಳು ಈ ವಿಚಾರದಲ್ಲಿ ಗಮನ ಕೊಟ್ಟೇ ಇಲ್ಲ ಎನ್ನುವ ಭಾವನೆ ನನ್ನದಲ್ಲ. ಆದರೆ ಇನ್ನೂ ಹೆಚ್ಚಿನ ಒತ್ತು ನೀಡಬೇಕಿರುವುದು ಇವತ್ತಿನ ಅನಿವಾರ್ಯತೆ ಆಗಿದೆ.

ಜನತೆ ಸಹ ಕನ್ನಡ ಭಾಷೆ ಉಳಿವಿಗೆ ಕನ್ನಡದಲ್ಲಿಯೇ ಮಾತನಾಡಬೇಕು. ನಿತ್ಯ ಜೀವನದ ವ್ಯವಹಾರಗಳಲ್ಲಿ ಕನ್ನಡ ಬಳಸಿ, ಮನೆಯಲ್ಲಿ ಮಕ್ಕಳ ಜತೆ ಕನ್ನಡದಲ್ಲೇ ಮಾತನಾಡಿ, ಮಕ್ಕಳು ಕನ್ನಡ ಭಾಷೆ ಕಲಿಯುವುದರಿಂದ ಭಾಷೆ ಉಳಿವಿಗೆ ಸಹಕಾರಿಯಾಗುತ್ತದೆ. ■



# ವಾಙ್ಮಯಲೋಕದ ವಿಸ್ಮಯ: ಕ.ಸಾ.ಪ. ಮಹಿಳಾ ಸಾಹಿತ್ಯ ಸಂಪುಟಗಳು

- ಕೆ. ರಾಜಕುಮಾರ್

ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹೀಗೆ ಸಾರ್ವಜನಿಕ ಬದುಕಿನ ಸಕಲ ಕ್ಷೇತ್ರಗಳಲ್ಲೂ ಮಹಿಳೆಯರನ್ನು ಪ್ರತಿಭೆಯಿದ್ದೂ ಕಡೆಗಣಿಸಲಾಗುತ್ತಿದೆ; ಅವಕಾಶ ವಂಚಿತರನ್ನಾಗಿ ಮಾಡಲಾಗುತ್ತಿದೆ ಎಂಬ ಮಾತು ಮೊದಲಿನಿಂದಲೂ ಕೇಳಿಬರುತ್ತಿದೆ. ಮಹಿಳಾ ಕಲ್ಯಾಣ, ಮಹಿಳಾ ಸಬಲೀಕರಣದಂತಹ ಹಲವು ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡರೂ ಸ್ತ್ರೀಯರು ಇನ್ನೂ ಸಂತ್ರಸ್ತರಾಗಿಯೇ ಉಳಿದುಕೊಂಡಿದ್ದಾರೆ. ಪರಂಪರೆಾಗತವಾಗಿ ಪುರುಷಶಾಹಿಗೆ ತುತ್ತಾಗಿ ಅವಜ್ಞೆಗೆ ಒಳಗಾಗಿದ್ದಾರೆ. ಆದರೂ ಇತ್ತೀಚಿಗೆ ಬದಲಾವಣೆಯ ಬಿಸುಪು ಗಾಳಿ ಅಲ್ಲಲ್ಲಿ ಬೀಸುತ್ತಿದೆ. ಸತತ ಒತ್ತಾಯಗಳು ಕ್ರಮೇಣ ಫಲ ನೀಡಲು ಆರಂಭಿಸಿವೆ. ಅವರು ಅಸಮಾಧಾನದ ಕೂಗನ್ನು ಶತಸಹಸ್ರ ಕಂಠಗಳಲ್ಲಿ ಮೊಳಗಿಸಲು ತೊಡಗಿದ್ದಾರೆ.

ಅಧ್ಯಾತ್ಮದಿಂದ ಆಡಳಿತದವರೆಗೆ ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಅಂಗನೆಯರು ಸಾಧನೆಯ ಹಾದಿಯಲ್ಲಿ ತಮ್ಮ ಇರುವನ್ನು ಪ್ರಕಟಿಸಿದ್ದಾರೆ. ದಾಖಲೆಗಳನ್ನು ಮುರಿದಿದ್ದಾರೆ; ಮೆರೆದಿದ್ದಾರೆ. ಸ್ತ್ರೀಯರಿಗೆ ಆದ್ಯತೆ ಎಂಬ ಮಾತು ಕ್ಷೀಣಿಸಿ, ಸ್ತ್ರೀ ಸಮಾನತೆ ಎಂಬ ಹಕ್ಕೊತ್ತಾಯದಿಂದ ಸ್ಥಾನಮಾನ ಪಡೆದುಕೊಳ್ಳುವ ಹಾಗೆ ಮಾಡಿದ್ದಾರೆ. ಹಾಗಾಗಿ ಅವರು ಅವಕಾಶಕ್ಕಾಗಿ ಹಲ್ಲುಗಿಂಜದೆ, ಸಮಾನ ನ್ಯಾಯಕ್ಕಾಗಿ ಆಗ್ರಹಿಸುತ್ತಿದ್ದಾರೆ. ವೇದ, ಪುರಾಣ, ಶಾಸ್ತ್ರಗಳು ಮಹಿಳೆಯರನ್ನು ಪೂಜಾರ್ಹರನ್ನಾಗಿ, ಮಾತೃಸಮಾನರನ್ನಾಗಿ ಕಂಡಿದ್ದರೂ ವಾಸ್ತವದಲ್ಲಿ ಹೆಣ್ಣು ಶೋಷಿತಳು. ಆಕೆ ಇದನ್ನು ಮೊದಲಿಗಿಂತ ಗಟ್ಟಿ ಧ್ವನಿಯಲ್ಲಿ; ಕೊರಳಿನಲ್ಲಿ ಹೆಚ್ಚು ಕಸುವು ತುಂಬಿಕೊಂಡು ಪ್ರಶ್ನಿಸುತ್ತಿದ್ದಾಳೆ. ನಾರಿಯರು ಮೀಸಲಾತಿ ಕೇಳದೆ ಅರ್ಹತೆಯನ್ನು ಪುರಸ್ಕರಿಸಿ ಎಂದು ಕೇಳುವ ಮಟ್ಟಕ್ಕೆ ಬೆಳೆದಿದ್ದಾರೆ.

ಪುರುಷ ಪ್ರಾಬಲ್ಯದ ವಾತಾವರಣದಲ್ಲೂ, ರಮಣಿಯರು ದೂರಲಂಘನ ಹಾಗೂ ಏರುಜಿಗಿತವನ್ನು ಸಾಧಿಸಿ ಹೊಸ ಆತ್ಮವಿಶ್ವಾಸವನ್ನು ಮೈಗೂಡಿಸಿಕೊಂಡಿದ್ದಾರೆ.

ಅಂತೆಯೇ ಪ್ರಮದೆಯರು ಹೊಸ, ಹೊಸ ಸಂವೇದನೆಗಳನ್ನು ಅಕ್ಷರಗಳಲ್ಲಿ ಅಭಿವ್ಯಕ್ತಿಸುತ್ತಿದ್ದಾರೆ. ಈ ಹಿಂದೆ ಲಲನೆಯರ ಬರೆಹ ಅಡುಗೆಮನೆ ಸಾಹಿತ್ಯ ಎಂಬ ಮೂದಲಿಕೆಗೆ ಒಳಗಾಗಿತ್ತು. ಅವರ ಅನುಭವದ ಜಗತ್ತು ಕಿರಿದಾಗಿತ್ತು. ಹಾಗಾಗಿ ಹೆಚ್ಚಿನ ಮಟ್ಟಿಗೆ ಅವರು ತಮ್ಮ ಅನುಭವಕ್ಕೆ ಬಂದದ್ದನ್ನೇ ಬರೆಯುತ್ತಿದ್ದರು. ವನಿತೆಯರು ಸೂಕ್ಷ್ಮ ಸಂವೇದಿಗಳಾಗಿ, ಸೃಜನೇತರ ಪ್ರಕಾರಗಳಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಪಡಿಮೂಡಿಸಿದರೂ ಅವರನ್ನು ವಿಮರ್ಶಾಲೋಕ ಗಂಭೀರವಾಗಿ ಪರಿಗಣಿಸಿರಲಿಲ್ಲ. ಕ್ರಮೇಣ ಲಲನೆಯರ ಅನುಭವದ ಜಗತ್ತು ವಿಸ್ತಾರ ಆಗತೊಡಗಿತು. ಪುರುಷ ಪ್ರಾಬಲ್ಯದ ಕ್ಷೇತ್ರಗಳಲ್ಲೂ ತಮ್ಮ ಅಸ್ತಿತ್ವವನ್ನು ದಾಖಲಿಸುವಂತಾಯಿತು. ಇದು ಅವರ ಸಾಹಿತ್ಯದಲ್ಲೂ ಪ್ರತಿಫಲಿಸತೊಡಗಿತು. 'ಅಡುಗೆಮನೆ' ಸಾಹಿತ್ಯ ಎಂಬ ಟೀಕೆ, ಕುಹಕ, ವ್ಯಂಗ್ಯ, ಮೂದಲಿಕೆ, ಚರ್ವಿತಚರ್ವಣ ಎಂಬ ಭಾವನೆ ಅಕ್ಷರಲೋಕದಲ್ಲಿ ನೆಲೆಗೊಳ್ಳುವಂತಾಯಿತು. ಇಂದು ಪ್ರಮೀಳೆಯರು ಯಾವುದೇ ವಿಚಾರವನ್ನಾಗಲೀ ಅಧಿಕಾರಯುತವಾಗಿ ಬರೆಯಬಲ್ಲರು. ಎಲ್ಲ ಕ್ಷೇತ್ರಗಳ ಸೂಕ್ಷ್ಮ ಸಂವೇದನೆಗಳನ್ನೂ ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸುವ ಸಾಮರ್ಥ್ಯವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಆದರೆ ಅವರ ಸಾಧನೆಗಳನ್ನು ಒಂದೆಡೆ ಪರಿಶೀಲಿಸಲು, ಪರಾಮರ್ಶಿಸಲು ಸಾಧ್ಯವಾಗುವಂತಹ ಸನ್ನಿವೇಶ ನಿರ್ಮಾಣವಾಗಿರಲಿಲ್ಲ. ಇದನ್ನು ಮನಗಂಡು ಕನ್ನಡದ ಏಕಮಾತ್ರ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ಮಹಿಳಾ ಸಾಹಿತ್ಯ ಸಂಪುಟಗಳನ್ನು ಹೊರತಂದಿದೆ. ಪ್ರಾಯಶಃ ಭಾರತದಲ್ಲಿ ಯಾರೂ ಮಾಡದ, ಯೋಚಿಸಿಯೂ ಇರದ ಕಾರ್ಯ ಕನ್ನಡದಲ್ಲಾಗಿದೆ. ಪರಿಷತ್ತಿನ ೨೫ನೆಯ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಲೇಖಕಿ ಮಲ್ಲಿಕಾ ಘಂಟಿ ಅವರು ಈ ಕುರಿತ ಹೊಳಹನ್ನು ನೀಡಿದ ಕೂಡಲೇ ಅದನ್ನು ಅನುಷ್ಠಾನ ಮಾಡಲು ಮುಂತೊಡಗಿದರು. ಕೇವಲ ಎಂಟೇ ತಿಂಗಳಲ್ಲಿ ಮಹಿಳಾ ಸಂಪುಟಗಳನ್ನು ಹೊರತಂದ ಅಗ್ಗಳಿಕೆ ಅವರದು. ಕಥೆ, ಕಾವ್ಯ, ಲಲಿತ ಪ್ರಬಂಧ, ಜಾನಪದ, ವಿಮರ್ಶೆ, ಸ್ತ್ರೀವಾದಿ ಚಿಂತನೆ, ಅಂಕಣ ಬರಹ ಮತ್ತು ಸಂಕೀರ್ಣ ಹೀಗೆ ಎಂಟು ಸಂಪುಟಗಳಲ್ಲಿ ಪ್ರಾತಿನಿಧಿಕ ಎನ್ನುವ ಲೇಖಕಿಯರ



## ಕನ್ನಡ ಸಾಹಿತ್ಯ ಪರಿಷತ್ತಿಗೆ ಆಡಳಿತಾಧಿಕಾರಿಗಳ ನೇಮಕ

**ಶ್ರೀ ಎಸ್. ರಂಗಪ್ಪ,** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ಇವರನ್ನು ದಿನಾಂಕ ೦೩–೦೯–೨೦೨೧ ರಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಯಾಗಿ ನೇಮಿಸಿ ಸರ್ಕಾರ ಆದೇಶಿಸಿದೆ.

ಬರೆಹಗಳನ್ನು ಆಯ್ದು ಪ್ರಕಟಿಸಲಾಗಿದೆ. ಇಂದು ನಮ್ಮೊಡನೆ ಇಲ್ಲದ ಲೇಖಕಿಯರ ಬರೆಹಗಳನ್ನೂ ಒಳಗೊಂಡಿದೆ. ಅದು ಈ ಸಂಪುಟಗಳಿಗೆ ಸಮಗ್ರತೆಯನ್ನು ನೀಡಿದೆ. ಒಟ್ಟು ೨೫೮೯ ಪುಟಗಳಲ್ಲಿನ ಈ ಹೊತ್ತಿಗೆಗಳು ಕನ್ನಡ ಲೇಖಕಿಯರ ಅನುಭವದ ಜಗತ್ತು, ಆಲೋಚನಾ ವಿಧಾನ, ಅಭಿವ್ಯಕ್ತಿಯ ಕ್ರಮ, ಸಂವಹನದ ಹೊಸ ಕೌಶಲಗಳನ್ನು ಅನಾವರಣಗೊಳಿಸಿವೆ. ಹಲವು ಕಡೆ ಸೃಜನಶೀಲತೆ ಪರಾಕಾಷ್ಠೆ ತಲುಪಿರುವುದನ್ನೂ ಕಾಣಬಹುದು. ಈ ಸಂಪುಟಗಳು ನಮ್ಮ ಲೇಖಕಿಯರಲ್ಲಿ ಆತ್ಮವಿಶ್ವಾಸವನ್ನು ವರ್ಧಿಸುವ ಕೆಲಸವನ್ನೂ ಮಾಡುತ್ತವೆ. ದಪ್ಪಕಟ್ಟಿನ, ಹಾಲು ಬಿಳುಪು ಕಾಗದದ, ಸುಂದರ ಮುದ್ರಣದ ಈ ಗ್ರಂಥಗಳು ಭೌತಿಕವಾಗಿ ಕಣ್ಮನಗಳನ್ನು ತಣಿಸುತ್ತವೆ. ಪುಟ ತಿರುಗಿಸಿ ಓದಿದರೆ ನಮ್ಮ ಬರೆಹಗಾರ್ತಿಯರು ಸಾಧಿಸಿರುವ ಬೌದ್ಧಿಕ ಏರುಗತಿ ಮನವರಿಕೆಯಾಗಿ ಹೃನ್ಮನಗಳು ಕುಣಿಯುತ್ತವೆ.




ಸಾಹಿತ್ಯದ ಎಂಟು ಪ್ರಕಾರಗಳ ಸಂಪಾದಕರನ್ನು ಆಯ್ಕೆ ಮಾಡುವಾಗಲೂ ಅವರ ಸಾಧನೆ, ಸಿದ್ಧಿ ಮತ್ತು ಅರ್ಹತೆಯನ್ನು ಪ್ರಧಾನವಾಗಿ ಪರಿಗಣಿಸಲಾಗಿದೆ. ಈ ಸಂಪುಟಗಳಿಗೆ ಆಯಾ ಲೇಖಕಿಯರ ಪ್ರಕಟಿತ ಬರೆಹಗಳಲ್ಲಿ ಅತ್ಯುತ್ತಮ ಮತ್ತು ಪ್ರಾತಿನಿಧಿಕವಾದುವನ್ನು ಆಯ್ಕೆಮಾಡಿರುವುದರಿಂದ ಇದರ ಉಪಯುಕ್ತತೆ ಮತ್ತು ಮಹತ್ವ ಇಮ್ಮಡಿಸಿದೆ. ಈ ಎಂಟು ಪ್ರಕಾರಗಳ ಸಂಪಾದಕರು: ಕಾವ್ಯ (ಡಾ. ಪಿ. ಚಂದ್ರಿಕಾ), ಕಥೆ (ಡಾ. ಪದ್ಮಿನಿ ನಾಗರಾಜು), ಲಲಿತ ಪ್ರಬಂಧ (ಡಾ॥ ತಮಿಳು ಸೆಲ್ವಿ, ಬಾ.ಹ. ರಮಾಕುಮಾರಿ), ಜಾನಪದ (ಡಾ॥ ಗುರುದೇವಿ ಹುಲೆಪ್ಪನವರ ಮಠ), ವಿಮರ್ಶೆ (ಡಾ. ಎಂ.ಎಸ್. ಆಶಾದೇವಿ), ಸ್ತ್ರೀವಾದಿ ಚಿಂತನೆ (ಡಾ. ಮಲ್ಲಿಕಾ ಘಂಟಿ), ಅಂಕಣ ಬರಹ (ಡಾ. ಪ್ರತಿಭಾ ನಂದಕುಮಾರ್) ಮತ್ತು ಸಂಕೀರ್ಣ (ಡಾ. ಎನ್. ಲಕ್ಷ್ಮೀ). ಈ ಮಾಲಿಕೆಯ ಸಂಪಾದಕರು ಡಾ. ಮಲ್ಲಿಕಾ ಘಂಟಿ. ಇದರ ಪ್ರಧಾನ ಸಂಪಾದಕರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ॥ ಮನು ಬಳಿಗಾರ್. ನವಮಾಸಗಳು ತುಂಬುವ ಮೊದಲೇ ಈ ಯೋಜನೆಯನ್ನು ಕಾರ್ಯಗತಗೊಳಿಸಿ, ಈ ಹೊತ್ತಿಗೆಗಳನ್ನು ಕನ್ನಡಿಗರ ಕೈಗಿತ್ತ ಶ್ರೇಯ ಅವರಿಗೆ ಸಲ್ಲುತ್ತದೆ. ಅವರ ಅಧ್ಯಕ್ಷಾವಧಿಯಲ್ಲಿನ ಮೇರು ಸಾಧನೆಗಳಲ್ಲಿ ಇದೂ ಒಂದು. ಇತರ ಭಾರತೀಯ ಭಾಷೆಗಳಲ್ಲೂ ಇಂತಹ ಕಾರ್ಯವಾಗಲು ಇದು ಪ್ರೇರಣೆ ನೀಡುತ್ತದೆ. ಇಲ್ಲಿನ ಕೆಲ ಬರೆಹಗಳನ್ನು ಇತರ ಭಾಷೆಗಳಿಗೆ ಅನುವಾದಿಸುವಂತೆ ಆಗಬೇಕು. ವಿಶ್ವವಿದ್ಯಾಲಯಗಳು ಈ ಕೃತಿಗಳ ಆಯ್ದ ಭಾಗಗಳನ್ನು ಪಠ್ಯವಾಗಿ ನಿಗದಿಪಡಿಸುವ ಸಾಧ್ಯತೆಗಳು ಇದೀಗ ತೆರೆದುಕೊಂಡಿವೆ. ನಾಡೋಜ ಡಾ. ಮನು ಬಳಿಗಾರ್ ಅವರು ಸಮಸ್ತ ನಾರಿಲೋಕದ ಕೃತಜ್ಞತೆಗಳಿಗೆ ಪಾತ್ರರು.

ಪ್ರತಿ ಸಂಪುಟದಲ್ಲೂ ಮಾಲಿಕೆಯ ಪ್ರಧಾನ ಸಂಪಾದಕರ ನುಡಿ, ಸಂಪಾದಕರ ನುಡಿ ಹಾಗೂ ಆಯಾ ನಿರ್ದಿಷ್ಟ ಸಂಪುಟದ ಸಂಪಾದಕರ ವಿದ್ವತ್ಪೂರ್ಣ ಸುದೀರ್ಘ ಪ್ರಸ್ತಾವನೆ ಉಂಟು. ಇವು ಈ ಮಾಲೆಯ ಪರಾಮರ್ಶನ ಮೌಲ್ಯವನ್ನು ಹೆಚ್ಚಿಸಿವೆ. ಕನ್ನಡದ ಆಕರ ಗ್ರಂಥಗಳಲ್ಲಿ ಇವೂ ಸೇರುತ್ತವೆ.

ಈ ಮಾಲೆಯನ್ನು ತಿದ್ದಿ–ತೀಡಿ, ನೇರ್ಪುಗೊಳಿಸಿ ಸರ್ವಾಂಗ ಸುಂದರವಾಗಿಸಿದವರು ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣ ವಿಭಾಗದ ರಾಜ್ಯ ಸಂಚಾಲಕರೂ, ಹಿರಿಯ ಪತ್ರಕರ್ತರೂ ಆದ ಡಾ॥ ಪದ್ಮರಾಜ ದಂಡಾವತಿ. ಅವರೂ ಸಹ ಅಭಿನಂದನೆಗೆ ಪಾತ್ರರು.

ಈ ಪುಸ್ತಕಗಳು ಬಿಡಿಯಾಗಿಯೂ ಅಥವಾ ಒಟ್ಟಾಗಿಯೂ ಮಾರಾಟಕ್ಕೆ ಲಭ್ಯವಿವೆ. ಈ ಸಂಗ್ರಹಯೋಗ್ಯ ಎಂಟು ಸಂಪುಟಗಳ ಮಾಲೆಯ ಒಟ್ಟು ಬೆಲೆ ರೂ. ೧೯೮೦/–. ಪರಿಷತ್ತಿನ ಸದಸ್ಯರಿಗೆ ೩೦% ರಿಯಾಯಿತಿ ದರದಲ್ಲಿ ರೂ. ೧೩೮೬/–ಕ್ಕೆ ಲಭ್ಯವುಂಟು. ಈಗಾಗಲೇ ನೂರಾರು ಸೆಟ್‌ಗಳು ಖರ್ಚಾಗಿವೆ ಎಂಬುದು ದಾಸ್ತಾನು ಬೇಗ ಖಾಲಿಯಾಗಲಿದೆ ಎಂಬುದರ ಶುಭ ಸೂಚನೆ. ನಮ್ಮ ಲೇಖಕಿಯರು ಇವನ್ನು ತಮ್ಮ ಬೌದ್ಧಿಕ ಆಸ್ತಿಯ ಭಾಗವಾಗಿ ಸಂಗ್ರಹಿಸಿ ಇಟ್ಟುಕೊಳ್ಳಬಹುದು. ಅವರು ನಿರಾಭಾರಿಗಳಾಗುವ ಏಕೈಕ ಮಾರ್ಗವಿದು.

ಈ ಮಹತ್ವಪೂರ್ಣ ಮಾಲೆ ಕುರಿತು ಸಾಹಿತ್ಯ ಪರಿಷತ್ತು ಎರಡು ದಿನಗಳ ವಿಚಾರ ಸಂಕಿರಣವನ್ನು ನಡೆಸಿತು. ಅಲ್ಲಿ ಈ ಹೊತ್ತಿಗೆಗಳ ಆಮೂಲಾಗ್ರ, ತಲಸ್ಪರ್ಶಿ ಸಮೀಕ್ಷೆ ನಡೆಯಿತು. ಇದನ್ನು 'ಬುಕ್ ಬ್ರಹ್ಮ' ಸಂಸ್ಥೆಯ ಮೂಲಕ ನೇರಪ್ರಸಾರ ಮಾಡಿಸಲಾಯಿತು. ಮಹಿಳಾ ಸಂಪುಟಗಳು ವಿಚಾರ ಗೋಷ್ಠಿ ಎಂದು ಯೂ ಟ್ಯೂಬ್‌ನಲ್ಲಿ ಗಾಲಿಸಿದರೆ, ಈಗಲೂ ನೋಡಬಹುದು.

ಕನ್ನಡದ ಜಾಣ, ಜಾಣೆಯರು ಈ ಅಕ್ಷರ ಐಸಿರಿಯನ್ನು ತಮ್ಮ ಗ್ರಂಥ ಭಂಡಾರದ ಭಾಗವಾಗಿಸಿಕೊಂಡು ಅದರ ಪ್ರಯೋಜನವನ್ನು ಪಡೆದುಕೊಳ್ಳಬಹುದು. ■

## ಸಾದರ ಸ್ವೀಕಾರ

**ಮಹಾರಾಷ್ಟ್ರದ ಕನ್ನಡ ಸ್ಥಳನಾಮಗಳು**
**ಲೇ : ಡಾ. ಜಿ.ಎನ್. ಉಪಾಧ್ಯ**
ಪು : ೧೬೫ ಬೆಲೆ : ರೂ. ೧೪೦=೦೦
ಪ್ರ : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ

**ಕನ್ನಡ ಕಾರಣ ಪುರುಷ ರಾ.ಹ. ದೇಶಪಾಂಡೆ**
**ಸಂ : ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ**
ಪು : ೨೨೮ ಬೆಲೆ : ರೂ. ೨೫೦=೦೦
ಪ್ರ : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ

**ನನ್ನವಳು**
**ಲೇ : ವೀರಪ್ಪ ಮ. ನಿಂಗೋಜಿ**
ಪು : ೬೪ ಬೆಲೆ : ರೂ. ೬೦=೦೦
ಪ್ರ : ಲಲಿತಾ ಪ್ರಕಾಶನ, ಕರಮುಡಿ, ಯಲಬುರ್ಗಾ ತಾ.

**ಕೊಪ್ಪಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಾಹಿತಿ ಕೋಶ**
**ಸಂ : ಅಕ್ಬರ್ ಸಿ. ಕಾಲಿಮಿರ್ಚಿ, ಶಿ.ಕಾ. ಬಡಿಗೇರ**
ಪು : ೨೩೬ ಬೆಲೆ : ರೂ. ೧೫೦=೦೦
ಪ್ರ : ಜಿಲ್ಲಾ ಕ.ಸಾ.ಪ. ಕೊಪ್ಪಳ

**ಶ್ರೀಕಾರ**
**ಸಂ : ಸಿದ್ಧಯ್ಯ ಪುರಾಣಿಕ, ರಾಘವೇಂದ್ರ ಇಟಗಿ**
ಪು : ೧೧೯ ಬೆಲೆ : ರೂ. ೧೦೦=೦೦
ಪ್ರ : ಜಿಲ್ಲಾ ಕ.ಸಾ.ಪ. ಕೊಪ್ಪಳ

**ಕಲಬುರ್ಗಿ ಐತಿಹಾಸಿಕ ಕೋಟೆ**
**ಲೇ : ಪ್ರೊ. ವೀರಣ್ಣ ಎಂ. ಪಡಶೆಟ್ಟಿ**
ಪು : ೭೬ ಬೆಲೆ : ರೂ. ೫೦=೦೦
ಪ್ರ : ವೀರಣ್ಣ ಎಂ. ಪಡಶೆಟ್ಟಿ, ಕಲಬುರ್ಗಿ

**ಮಡಿವಾಳ ಮಾಚಿದೇವರ ವಚನ ವೈಭವ**
**ಲೇ : ಎ.ಕೆ. ರಾಮೇಶ್ವರ**
ಪು : ೧೮೦ ಬೆಲೆ : ರೂ. ೧೫೦=೦೦
ಬೆಂಗಳೂರು

**ತತ್ತ್ವದ ಪದಗಳು**
**ಲೇ : ಶೇಷ ನವರತ್ನ**
ಪು : ೧೮೦ ಬೆಲೆ : ರೂ. ೯೦=೦೦
ಪ್ರ : ಸಮಾಜ ಪುಸ್ತಕಾಲಯ, ಧಾರವಾಡ

**ಹಿಂದೂಧರ್ಮದ ವಿರಾಟ್‌ಸ್ವರೂಪ**
**ಲೇ : ಶೇಷ ನವರತ್ನ**
ಪು : ೩೦೬ ಬೆಲೆ : ರೂ. ೨೮೦=೦೦
ಪ್ರ : ಸಮಾಜ ಪುಸ್ತಕಾಲಯ, ಧಾರವಾಡ

**ಮಕ್ಕಳ ರಾಮಾಯಣ**
**ಲೇ : ಮಧುರಕಾನನ ಗೋಪಾಲಕೃಷ್ಣ ಭಟ್**
ಪು : ೫೨೦ ಬೆಲೆ : ರೂ. ೩೯೬=೦೦
ಪ್ರ : ರಂಗಕಹಳೆ ಪ್ರಕಾಶನ, ಬೆಂಗಳೂರು

**ಚುಟುಕು ಮಿಣಿಕು ಮತ್ತು ನಾಲ್ಕು ಮಿನಿಕಥೆಗಳು**
**ಲೇ : ಮಧುರಕಾನನ ಗೋಪಾಲಕೃಷ್ಣ ಭಟ್**
ಪು : ೬೮ ಬೆಲೆ : ರೂ. ೫೦=೦೦
ಪ್ರ : ಮಧುರ ಧ್ವನಿ ಪ್ರಕಾಶನ, ಬೇಳ, ಕಾಸರಗೋಡು ತಾ.

**ಮಾಯಾ ಬಜಾರ**
**ಲೇ : ಶಿವನಗೌಡ ಪಾಟೀಲ**
ಪು : ೧೦೪ ಬೆಲೆ : ರೂ. ೧೦೦=೦೦
ಪ್ರ : ಭೂಮಿ ಪ್ರಕಾಶನ ವಿಜಾಪುರ

**ಅಂತರ್ಮುಖ**
**ಲೇ : ಜಿ.ಆರ್. ಸತ್ಯಲಿಂಗರಾಜು**
ಪು : ೩೩೨ ಬೆಲೆ : ರೂ. ೨೫೦=೦೦
ಪ್ರ : ರೂಪ ಪ್ರಕಾಶನ, ಮೈಸೂರು

**ಜೀವನದಿಯ ಸೆಳವು**
**ಲೇ : ಎಂ.ಎಂ. ಪುರದನಗೌಡರ**
ಪು : ೬೪ ಬೆಲೆ : ರೂ. ೮೦=೦೦
ಪ್ರ : ಪ್ರತಿಭಾ ಪ್ರಕಾಶನ, ಕಲಘಟಗಿ

**ಪಲ್ಲವಿಸುವ ಮನ**
**ಲೇ : ಪಲ್ಲವಿ ಗೋಪಿನಾಥ್**
ಪು : ೭೬ ಬೆಲೆ : ರೂ. ೯೦=೦೦
ಪ್ರ : ಟಿ.ಸಿ. ಗೋಪಿನಾಥ್, ಬೆಂಗಳೂರು

**ವಿಶ್ವಬಂಧು ಮರುಕುಂಬಿ ಶ್ರೀಗಳು**
**ಲೇ : ನಾ.ಮ. ಬಸವರಾಜಯ್ಯ**
ಪು : ೧೬೮ ಬೆಲೆ : ರೂ. ೧೦೦=೦೦
ಪ್ರ : ಎಚ್.ಎಂ. ಗುರುಪಾದಸ್ವಾಮಿ, ಮರುಕುಂಬಿ, ಗಂಗಾವತಿ

**ಮಧುರಚೆನ್ನರ ಅಧ್ಯಯನದ ಹಾದಿ**
**ಲೇ : ಅನಸೂಯಾ ಚನವೀರಪ್ಪಾ ಗಲಗಲಿ**
ಪು : ೨೫೩ ಬೆಲೆ : ರೂ. ೧೫೦=೦೦
ಪ್ರ : ಅಭಿಜಿತ್ ಪ್ರಕಾಶನ, ಮುಂಬಯಿ

**ಅಕ್ಕೂರಮಠರ ಸಮಗ್ರ ಸಾಹಿತ್ಯ**
**ಸಂಪುಟ–೧ ವಚನ ಸಾಹಿತ್ಯ ದರ್ಶನ**
**ಲೇ : ಷಣ್ಮುಖಯ್ಯ ಅಕ್ಕೂರಮಠ**
ಪು : ೪೯೨ ಬೆಲೆ : ರೂ. ೫೦೦=೦೦
ಪ್ರ : ಅನುಪಮ ಪ್ರಕಾಶನ ಅಥಣಿ–೫೯೧೩೦೪, ಬೆಳಗಾವಿ ಜಿಲ್ಲೆ

**ಡಾ. ಜಿ.ಡಿ. ಜೋಶಿಯವರ ಬದುಕು ಮತ್ತು ಬರಹ**
**ಲೇ : ಸುಜ್ಞಾನಿ ಬಿ. ಬಿರಾದಾರ**
ಪು : ೨೦೮ ಬೆಲೆ : ರೂ. ೧೦೦=೦೦
ಪ್ರ : ಅಭಿಜಿತ್ ಪ್ರಕಾಶನ, ಮುಂಬಯಿ

**ಕನ್ನಡ ದೀಪಗಳು**
**ಸಂ : ಮೋಹನ ನಾಗಮ್ಮನವರ**
ಪು : ೪೪೦ ಬೆಲೆ : ರೂ. ೨೫೦=೦೦
ಪ್ರ : ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ–೫೮೦೦೦೧

**ಅಮ್ಮ ಹೇಳಿದ ಗಾದೆಗಳು**
**ಸಂ : ವೀರಭದ್ರ ಚನ್ನಮಲ್ಲ ಸ್ವಾಮೀಜಿ**
ಪು : ೧೧೫ ಬೆಲೆ : ರೂ. ೫೦=೦೦
ಪ್ರ : ಮಾನವಧರ್ಮ ಪ್ರಕಾಶನ, ಬಸವನಗುಡಿ, ಬೆಂಗಳೂರು – ೦೪

**ಚಿತ್ರಾನ್ನ (೩೨ ನೈಜ ದಂತ ಕಥೆಗಳು)**
**ಸಂ : ಡಾ॥ ಮುರಲೀ ಮೋಹನ್ ಚೂಂತಾರು**
ಪು : ೧೨೬ ಬೆಲೆ : ರೂ. ೨೦೦=೦೦
ಪ್ರ : ಚೂಂತಾರು ಸರೋಜಿನಿ ಭಟ್ ಪ್ರತಿಷ್ಠಾನ (ರಿ), ಮಂಗಳೂರು

**ಪ್ರೇಮ ಗುಚ್ಛ**
**ಲೇ : ಈರಣ್ಣ ಗೋಲಪ್ಪ ಬೆಕಿನಾಳ**
ಪು : ೫೬ ಬೆಲೆ : ರೂ. ೫೦=೦೦
ಪ್ರ : ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಇಂಗಳೇಶ್ವರ

**ಗರುಡ**
**ಲೇ : ಡಾ. ಉಮೇಶ ಜಗದಾಳ**
ಪು : ೫೭ ಬೆಲೆ : ರೂ. ೪೦=೦೦
ಪ್ರ : ಚಿತ್ರಾಣಿ ಪ್ರಕಾಶನ, ವಿಜಯಪುರ

**ಭಾವಸ್ಪಂದನ**
**ಲೇ : ರಾಮಚಂದ್ರ ವ್ಹಿ. ಪಾಟೀಲ**
ಪು : ೭೪ ಬೆಲೆ : ರೂ. ೬೦=೦೦
ಪ್ರ : ಪವನ ಪ್ರಕಾಶನ, ಧಾರವಾಡ

**ಕಲ್ಪವೃಕ್ಷ**
**ಲೇ : ಡಾ. ಕೆ.ಕೆ. ಹಿರೇಮಠ**
ಪು : ೧೪೨ ಬೆಲೆ : ರೂ. ೧೦೦=೦೦
ಪ್ರ : ಗಂಜೀಹಾಲ ವಿಶ್ವೇಶ್ವರ ಪ್ರಕಾಶನ, ಗಂಜೀಹಾಲ, ಬಾಗಲಕೋಟೆ



ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಸ್ತುತ ಕಾರ್ಯಕಾರಿ ಸಮಿತಿಯ ಅವಧಿಯು ದಿನಾಂಕ ೦೩-೦೯-೨೦೨೧ಕ್ಕೆ ಮುಕ್ತಾಯಗೊಳ್ಳುತ್ತಿರುವುದರಿಂದ ಆಡಳಿತಾಧಿಕಾರಿಯನ್ನು ನೇಮಿಸುವುದು ಅವಶ್ಯವಾಗಿರುತ್ತದೆ ಎಂದು ಕೋರಿ ಕ.ಸಾ.ಪ. ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಾದ ಡಾ. ಜೆ. ರವಿಶಂಕರ್ ಅವರನ್ನು ಭೇಟಿಮಾಡಿ ಪತ್ರ ನೀಡಿದರು. ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಜೊತೆಗಿದ್ದರು.




ಅತ್ಯುತ್ತಮ ಪ್ರಕಾಶನ ಸಂಸ್ಥೆಗೆ ನೀಡುವ 'ಅಂಕಿತ ಪುಸ್ತಕ ದತ್ತಿ ಪುರಸ್ಕಾರ'ವನ್ನು ಬೆಂಗಳೂರಿನ ರಾಷ್ಟ್ರೋತ್ಥಾನ ಸಾಹಿತ್ಯಕ್ಕೆ ನೀಡಲಾಯಿತು. ಸಂಸ್ಥೆಯ ಪರವಾಗಿ ಶ್ರೀ ನಾ. ದಿನೇಶ್ ಹೆಗಡೆ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಎಸ್. ರಂಗಪ್ಪನವರು ಈ ಪುರಸ್ಕಾರವನ್ನು ಪ್ರದಾನ ಮಾಡಿದರು. ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ದತ್ತಿ ದಾನಿಗಳಾದ ಶ್ರೀ ಪ್ರಕಾಶ್ ಕಂಬತ್ತಳ್ಳಿ, ಪರಿಷತ್ತಿನ ಪದಾಧಿಕಾರಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್, ಶ್ರೀ ಪಿ. ಮಲ್ಲಿಕಾರ್ಜುನಪ್ಪ ಸಮಾರಂಭದಲ್ಲಿ ಉಪಸ್ಥಿತರಿದ್ದರು



"೭೫ನೆಯ ಸ್ವಾತಂತ್ರ್ಯ ದಿನಾಚರಣೆಯ" ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರು ಧ್ವಜಾರೋಹಣ ನೆರವೇರಿಸಿದರು. ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್, ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಬೆಂಗಳೂರು ನಗರ ಜಿಲ್ಲಾ ಕ.ಸಾ.ಪ. ಅಧ್ಯಕ್ಷರಾದ ಶ್ರೀ ಮಾಯಣ್ಣ ಸೇರಿದಂತೆ ಪರಿಷತ್ತಿನ ಎಲ್ಲ ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.



ಕನ್ನಡದ ವಿಶೇಷ ದೃಷ್ಟಿಚೇತನ ಲೇಖಕರೊಬ್ಬರಿಗೆ ಪ್ರತಿವರ್ಷ ಪ್ರಶಸ್ತಿ ನೀಡಿ ಪುರಸ್ಕರಿಸುವ ಸಲುವಾಗಿ ಡಾ. ಎಚ್. ವಿಶ್ವನಾಥ್ ಮತ್ತು ಎಂ.ಎಸ್. ಇಂದಿರಾ ಅವರು ರೂ. ೨,೫೦,೦೦೦/- ಗಳ ದತ್ತಿನಿಧಿ ಠೇವಣಿಯನ್ನು ಪರಿಷತ್ತಿನಲ್ಲಿ ಸ್ಥಾಪಿಸಲು ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರಿಗೆ ಚೆಕ್ ನೀಡಿದರು. ಈ ಸಂದರ್ಭದಲ್ಲಿ ಖ್ಯಾತ ಅಂಕಣಕಾರರಾದ ಶ್ರೀ ಎಸ್. ಷಡಾಕ್ಷರಿ ಅವರೊಂದಿಗೆ ಪರಿಷತ್ತಿನ ಪದಾಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನಪ್ಪ, ಶ್ರೀ ಕೆ. ರಾಜಕುಮಾರ್ ಹಾಗೂ ಡಾ. ಪದ್ಮರಾಜ ದಂಡಾವತಿ ಹಾಜರಿದ್ದರು.



ಕ.ಸಾ.ಪ. ಸಿಬ್ಬಂದಿಗಳಿಗೆ ನೀಡುವ 'ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಸ್ಮರಣಾರ್ಥ ಸಿಬ್ಬಂದಿ ಸೇವಾ ಸಾಧನೆ ದತ್ತಿ ಪ್ರಶಸ್ತಿ'ಯನ್ನು ಶ್ರೀ ಎನ್. ಶಿವಣ್ಣ ಹಾಗೂ ಶ್ರೀ ಪಾರ್ಶ್ವನಾಥ ಅವರಿಗೆ ಮತ್ತು 'ಶ್ರೀಮತಿ ಎಸ್. ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿ'ಯನ್ನು ಶ್ರೀ ವಿ. ಚಿನ್ನಪ್ಪರಾಜು ಅವರಿಗೆ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಪ್ರದಾನ ಮಾಡಿದರು. ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಹಾಗೂ ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್ ಉಪಸ್ಥಿತರಿದ್ದರು.

**Kannada Nudi:** 16th JULY - 3rd SEPTEMBER - 2021 “Registered with the registrar of Newspaper of in India under serial No: KARKAN/13252/1967”




ಕನ್ನಡ ಸಾಹಿತ್ಯ ಪರಿಷತ್ತಿನ ೨೦೧೬–೨೦೨೧ನೆಯ ಸಾಲಿನ ಅವಧಿಯ ಕಾರ್ಯಕಾರಿ ಸಮಿತಿ ಸದಸ್ಯರು ದಿನಾಂಕ ೧೮–೦೮–೨೦೨೧ರಂದು ಬೆಂಗಳೂರಿನಲ್ಲಿ ಜರುಗಿದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದರು. ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ, ಪರಿಷತ್ತಿನ ಪದಾಧಿಕಾರಿಗಳಾದ ಡಾ. ಪದ್ಮರಾಜ ದಂಡಾವತಿ, ಶ್ರೀ ಕೆ. ರಾಜಕುಮಾರ್, ಶ್ರೀ ಪಿ. ಮಲ್ಲಿಕಾರ್ಜುನಪ್ಪ ಅವರೊಂದಿಗೆ ಜಿಲ್ಲಾ ಮತ್ತು ಗಡಿನಾಡು ಘಟಕಗಳ ಕ.ಸಾ.ಪ. ಅಧ್ಯಕ್ಷರು, ನಾಮನಿರ್ದೇಶಿತ ಸದಸ್ಯರುಗಳು ಭಾಗವಹಿಸಿದ್ದರು.


ಕನ್ನಡ ನುಡಿ (ಮಾಸ ಪತ್ರಿಕೆ)
KANNADA NUDI MONTHLY
ಕನ್ನಡ ಸಾಹಿತ್ಯ ಪರಿಷತ್ತು
KANNADA SAHITHYA PARISHAT
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮
Pampa Mahakavi Road, Chamarajpete, Bengaluru-560 018.

ಪೀರ್‌ಡಿ ಆರ್ಟಿಕಲ್
ಬೆಲೆ ರೂ. ೧-೦೦

ಸಂಪಾದಕರು : ಬಿ.ಎನ್. ರಮೇಶ್, ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೫೬೦೦೧೮
ಮುದ್ರಣ : ಬಿ.ಎಂ.ಶ್ರೀ ಅಚ್ಚುಕೂಟ ಆಫ್‌ಸೆಟ್, ಪಂಪ ಮಹಾಕವಿ ರಸ್ತೆ , ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮